ಕರ್ನಾಟಕ ಜಾನಪದ ಅಕಾಡೆಮಿ

ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು-೫೬೦ ೦೦೨

ದೂರವಾಣಿ : ೦೮೦-೨೨೨೧೫೫೦೯

Kriya, SR Nagar, Bangalore. Ph.: 22234369

ಕರ್ನಾಟಕ ಸರ್ಕಾರ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕರ್ನಾಟಕ ಜಾನಪದ ಅಕಾಡೆಮಿ

ಬೆಂಗಳೂರು

ಕರ್ನಾಟಕ ಜಾನಪದ ಅಕಾಡೆಮಿ

೨೦೧೫ನೇ ಸಾಲಿನ

ವಾರ್ಷಿಕ ಪ್ರಶಸ್ತಿ ಪುರಸ್ಕೃತ

ನುಡಿಯ ಗುಡಿಗಾರರು

ಕರ್ನಾಟಕ ಜಾನಪದ ಅಕಾಡೆಮಿ

2015ನೇ ಸಾಲಿನ
ಪ್ರಶಸ್ತಿ ಪುರಸ್ಕೃತ
ನುಡಿಯ ಗುಡಿಗಾರರು

ಕರ್ನಾಟಕ ಜಾನಪದ ಅಕಾಡಮಿ
ಬೆಂಗಳೂರು

ಅಧ್ಯಕ್ಷರ ಮಾತು

ಅಜ್ಞಾನ ಮೂಲೆಗಳತ್ತ ಪಯಣದೇಶಭಾಷೆಗಳ ಜಾನಪದ ವಲಯಕ್ಕೆ ಸಿಗಬೇಕಾದ ಮಾನ್ಯತೆ ನಿರೀಕ್ಷೆಗೆ ತಕ್ಕಂತೆ ಸಿಗುತ್ತಿಲ್ಲ. ಇದು ದುರಂತದ ಒಂದು ಮುಖವಾಗಿರುವಂತೆಯೇ ಅಪಾಯದ ಕರೆಗಂಟೆಯೂ ಹೌದು. ಒಂದೆಡೆ ಕಾರ್ಪೊರೇಟ್ ಸಂಸ್ಕೃತಿಯಲ್ಲಿ ಶೋಷಕ ವ್ಯಕ್ತಿ ಅರ್ಮೂತವಾಗಿರುವಂತೆಯೇ ಮತ್ತೊಂದೆಡೆ ಮಾನವಿಕ ಶಿಸ್ತುಗಳು ಕೂಡಾ ವಾಣಿಜ್ಯೀಕರಣದ ಸುನಾಮಿಯಲ್ಲಿ ಕೊಚ್ಚಿಕೊಂಡು ಕ್ರಮೇಣ ಮರೆಯಾಗತ್ತಿದೆ. ಸಮಾಜವನ್ನು ತಾಯಿ ಹೃದಯದ ಜಾನಪದ ಸಂಸ್ಕೃತಿಗೆ ಹತ್ತಿರವಾಗಿಸಬಲ್ಲ ಮಾನವಿಕ ಶಾಸ್ತ್ರಗಳೇ ಈ ಸೈಬರ್ ಯುಗದಲ್ಲಿ ಅಪ್ರಸ್ತುತ ಮತ್ತು ನಿರುಪಯುಕ್ತವೆಂಬಂತೆ ಬಿಂಬಿಸುತ್ತಿರುವುದರಿಂದ ಸಹಜವಾಗಿಯೇ ಜೀವಕಾಳಜಿಗಳು ಅವಗಣನೆಗೆ ಈಡಾಗಿವೆ.

ಆದರೆ ಎಂದಿಗಾದರೂ ನಿಸರ್ಗ ಮತ್ತು ನಿಸರ್ಗದ ಪ್ರತಿಬಿಂಬದಂತಿರುವ ಜನಪದವೇ ಆಧುನಿಕ ಮಾನವರ ಸಂಕಟಗಳಿಗೆಲ್ಲಾ ಮೂಲ ಮದ್ದಾಗಬಲ್ಲಂತಹವು. ಈ ಅರಿವಿನ ಹಿನ್ನೆಲೆಯಲ್ಲಿಯೇ ಅಕಾಡೆಮಿ ತನ್ನ ಪ್ರತಿ ಹೆಜ್ಜೆಯನ್ನೂ ಎಚ್ಚರದಿಂದ ತೂಗಿ ನೋಡಿ ಮುಂದಿಡುತ್ತಿದೆ.

ಉಳಿದಂತೆ ಎಂದಿನಂತೆಯೇ ವಿಶೇಷ ಸಾಧನೆಗಳನ್ನು ಮಾಡಿದ ನುಡಿಯ ಗುಡಿಗಾರರನ್ನು ಗುರುತಿಸಿ ಗೌರವಿಸುತ್ತಿದ್ದೇವೆ. ರಾಜಕೀಯದಲ್ಲಿ ಇದ್ದೂ ಪ್ರಾಮಾಣಿಕತೆಗೆ ಸಾಕ್ಷಿಪ್ರಜ್ಞೆಯಂತಿರುವ ನಮ್ಮ ಪ್ರೀಟಿಯ ಮಾಯಲ ಮರಾಠಿ ರಮೇಶ್ ಕುಮಾರ್ ಅವರು ಮಂತ್ರಿಯಾಗಿ ಜನಪದರನ್ನು ಹರಸಲು ನಮ್ಮ ಜೊತೆಗಿರುವುದು ನನಗಂತೂ ಹೆಮ್ಮೆಯ ಸಂಗತಿ.

ಅಕಾಡೆಮಿಯ ಸರ್ವ ಸದಸ್ಯರಿಗೂ, ಸಿಬ್ಬಂದಿಗೂ ಹಾಗೂ ಪ್ರಭಾರ ರಿಜಿಸ್ಟ್ರಾರ್ ಆದಶ್ರೀ ಸಿದ್ದರಾಮ ಸಿಂಧೆ ಅವರಿಗೂ ನನ್ನ ಕೃತಜ್ಞತೆಗಳು ಸಲ್ಲಲೇಬೇಕು. ಪ್ರಶಸ್ತಿ ವಿಜೇತ ಜಾನಪದದ ತೇರನೆಳೆಯುತ್ತಿರುವ ಎಲ್ಲ ಶ್ರಮ ಮೂಲದ ಕಲಾವಿದರಿಗೂ ಅಭಿನಂದನೆಗಳು.

ಪಿಚ್ಚಳ್ಳಿ ಶ್ರೀನಿವಾಸ
ಅಧ್ಯಕ್ಷರು,
ಕರ್ನಾಟಕ ಜಾನಪದ ಅಕಾಡಮಿ

ಶ್ರೀಮತಿ ಮಾರಕ್ಕ

(ಬೆಂಗಳೂರು ನಗರ ಜಿಲ್ಲೆ)

ಸೋಬಾನೆ ಪದಗಳ ಗಾಯಕಿ

ಜನಪದ 'ಸಾಹಿತ್ಯ'ದಲ್ಲಿ ಹಾಡುವುದಕ್ಕೆ ವಿಶಿಷ್ಟ ಸ್ಥಾನವಿದೆ. ತಮ್ಮ ಬದುಕಿನ ಯಾವುದೇ ಅನುಭವಗಳನ್ನು ಹಾಡಾಗಿಸುವ ಕಲೆ ನಮ್ಮ ಜನಪದರಿಗೆ ಇತ್ತು ಮತ್ತು ಅದು ಇಂದಿಗೂ ಇದೆ. ಮದುವೆ, ಒಸಗೆ, ಹಬ್ಬ-ಹುಣ್ಣಿಮೆ, ದೈವಾಚರಣೆ, ಭಿತ್ತನೆ-ಒಕ್ಕಣೆ, ಕುಟ್ಟುವುದು-ಕೇರುವುದು; ಯಾವುದೇ ಕೆಲಸ, ಆಚರಣೆ-ಯ ಸನ್ನಿವೇಶವಾದರೂ ಕೂಡ ಅಲ್ಲಿ ತಮ್ಮ ಭಾವನೆಗಳನ್ನು ಅಭಿವ್ಯಕ್ತಿಸುವ ಒಂದು ಕ್ರಿಯೆಯಾಗಿ ಹಾಡಿಕೆ ಇರುತ್ತದೆ. ಇದರಲ್ಲಿ ಕಥನಗೀತೆಗಳೂ ಇರಬಹುದು; ಇಲ್ಲವೇ ಬಿಡಿರಚನೆಗಳೂ ಇರಬಹುದು. ಇವೆಲ್ಲವೂ ಜನಪದರ ಹಾಡುಗಾರಿಕೆಯ ಸಂಪ್ರದಾಯದ ಪದಗಳಾಗಿ ಇಂದಿಗೂ ಜನಮಾನಸದಲ್ಲಿ ಉಳಿದಿವೆ.

ಈ ಸಂಪ್ರದಾಯದ ಹಾಡುಗಳು ಬೇಸಾಯ ಪ್ರಧಾನ ಸಮಾಜದ ಹತ್ತು ಹಲವು ವಿಚಾರ ಮೌಲ್ಯಗಳನ್ನು ಪ್ರತಿನಿಧಿಸುತ್ತವೆ. ಇಂತಹ ಕೆಲಸವು ಬಹುಮುಖ್ಯವಾಗಿ ಮಹಿಳೆಯರಿಂದಲೇ ನಡೆದಿರುವುದು. ಪರಂಪರೆಯ ವಿಚಾರಗಳನ್ನು ಮುಂದುವರೆಸಿಕೊಂಡು ಬರುವ ಕಾಯಕದಲ್ಲಿ ಅಸಂಖ್ಯ ಮಹಿಳೆಯರು ಇಂದಿಗೂ ನಮ್ಮ ಸಮಾಜದಲ್ಲಿದ್ದಾರೆ. ಅಂದರೆ ಪಾರಂಪರಿಕ ಮೌಲ್ಯಗಳನ್ನು ಪಾಲಿಸಿ ಪೋಷಿಸಿಕೊಂಡು ಬರುವ ಹೊಣೆಯನ್ನು ಮಹಿಳೆಯರ ಮೇಲೆ ಹೊರಿಸಿರುವುದನ್ನು ನಾವಿಲ್ಲಿ ಗಮನಿಸಬಹುದು.

ಹಾಡಿಕೆಯ ಮೂಲಕ ಪಾರಂಪರಿಕ ಮೌಲ್ಯಗಳನ್ನು ಮುಂದುವರೆಸಿಕೊಂಡು ಬರುವವರಲ್ಲಿ ಶ್ರೀಮತಿ ಮಾರಕ್ಕ (67) ಕೂಡ ಒಬ್ಬರು. ವಿಶೇಷವಾಗಿ ಮಾರಕ್ಕನವರು ಗಂಗೇಗೌರಿ ಕಥನವನ್ನು ಸುದೀರ್ಘವಾಗಿ ಹಾಡುವ ಸಾಮರ್ಥ್ಯವಿದೆ. ಇಂತಹ ಕಲಾವಿದೆಯಾದ ಶ್ರೀಮತಿ ಮಾರಕ್ಕನವರಿಗೆ ಈ ಬಾರಿಯ ಅಕಾಡೆಮಿಯ ವಾರ್ಷಿಕ ಪ್ರಶಸ್ತಿ ನೀಡಿ ಗೌರವಿಸುವುದು ಸಂತಸವೆನ್ನಿಸುತ್ತದೆ.

ಶ್ರೀಮತಿ ಸಂಜೀವಮ್ಮ

(ಬೆಂಗಳೂರು ಗ್ರಾಮಾಂತರ ಜಿಲ್ಲೆ)

ಸೋಬಾನೆ ಪದ

ಪ್ರಸ್ತುತ ಸಮಾಜದಿಂದ ಜನಪದ ದನಿಬನಿಗಳು ಕಾಣೆಯಾಗುತ್ತಿರುವುದು ಎಲ್ಲರಿಗೂ ತಿಳಿದ ವಿಚಾರವೇ. ಆದರೆ ಇದರ ನಡುವೆಯೇ ಹಲವು ಜನಪದದ ಹಿರಿಯ ಜೀವಗಳು ಅವರ ಕಂಠಗಳು ಇಂದಿಗೂ ಮೊಳಗುತ್ತಿರುವುದರಿಂದ ಜನಪದ ಹಾಡಿಕೆಯ ಪರಂಪರೆ ಮುಂದುವರೆದಿದೆ. ಅಂತಹವರಿಂದ ಮೂಲ ಜನಪದಲಯಗಳು ಇಂದಿಗೂ ಹೊರಹೊಮ್ಮುವುದನ್ನು ಕೇಳಬಹುದು. ಅಂತಹ ಮೂಲಲಯಗಳನ್ನು ಹೊರಹೊಮ್ಮಿಸುವ ಹಿರಿಯ ಕಲಾವಿದರಲ್ಲಿ ಶ್ರೀಮತಿ ಸಂಜೀವಮ್ಮ ಕೂಡ ಒಬ್ಬರು.

ಇವರು ಬೆಂಗಳೂರು ಗ್ರಾಮಾಂತರ ಜಿಲ್ಲೆ ದೊಡ್ಡಬಳ್ಳಾಪುರ ತಾಲ್ಲೂಕು ಕಾಡತಿಪ್ಪೂರು ಗ್ರಾಮದವರು. ಇವರು ತಮ್ಮ ತಾಯಿ ಮುನಿಯಮ್ಮ ಮತ್ತು ಸಂಗಡಿಗರಿಂದ ಈ ಹಾಡುಗಾರಿಕೆಯನ್ನು ಕಲಿತರು. ನಂತರ ಇತರೆ ಕಲಾವಿದರೊಂದಿಗೆ ಕೂಡಿ ಹಾಡುವುದನ್ನು ಮುಂದುವರೆಸಿದರು. ಹಬ್ಬ, ಮದುವೆ. ಒಸಗೆ ಹೀಗೆ ಅನೇಕ ಸಮಾರಂಭಗಳಲ್ಲಿ ಹಾಡುವುದನ್ನು ಮಾಡಿದರು. ಅಲ್ಲದೆ ತಾವು ಮಾತ್ರ ಹಾಡದರೆ ತಮ್ಮ ನಂತರದಲ್ಲಿಯೂ ಈ ಹಾಡಿಕೆಯ ಪರಂಪರೆ ಮುಂದುವರೆಯಬೇಕೆಂಬ ಮಹದಾಸೆಯಿಂದ ನೂರಾರು ಕಿರಿಯರಿಗೆ ಹಾಡಲು ಕಲಿಸಿಕೊಟ್ಟಿರುವುದು ಇವರ ಹೆಗ್ಗಳಿಗೆ.

ಹೀಗೆ ತಮ್ಮ ಸಂಗಡಿಗರೊಂದಿಗೆ ಹಾಡುತ್ತ ಎಳೆಯರಿಗೆ ಕಲಿಸಿಕೊಡುತ್ತ ತಮ್ಮ ನೆರೆಹೊರೆಯ ಹತ್ತಾರು ಹಳ್ಳಿಗಳಲ್ಲಿ ಸೋಬಾನೆ ಪದಗಳನ್ನು ಹಾಡಿದರು. ಇಂದಿಗೂ ಈ ಹಾಡಿನ ಪರಂಪರೆಯನ್ನು ಮುಂದುವರೆಸಿಕೊಂಡು ಬರುತ್ತ ನಮ್ಮ ನಾಡಿನ, ಈ ನೆಲದ ಸಂಪ್ರದಾಯದ ಬೇರುಗಳಿಗೆ ಜನಪದರ ಮನದಾಳದ ಭಾವನೆಗಳ ನೀರು ಹರಿಸಿ ಪೋಷಿಸಿಕೊಂಡು ಬಂದಿದ್ದಾರೆ. ಇಂತಹವರ ಸಂಖ್ಯೆ ಹೇರಳವಾಗಿ ಇರುವವರೆಗೂ ನಮ್ಮ ನಾಡಿನ ಜನಪದ ಸಾಹಿತ್ಯ ಮತ್ತು ಸಂಗೀತ ಪರಂಪರೆ ಸಾತತ್ಯವನ್ನು ಹೊಂದಿರುತ್ತದೆ. ಕನ್ನಡ ಕರ್ನಾಟಕದ ಸಂಸ್ಕೃತಿಯ ತೇರನ್ನು ಎಳೆಯುವ ಇಂತಹವರಿಗೆ ಈ ಬಾರಿಯ ಅಕಾಡೆಮಿಯ ವಾರ್ಷಿಕ ಪ್ರಶಸ್ತಿ ನೀಡಿ ಸನ್ಮಾನಿಸಲು ಹರ್ಷವೆನ್ನಿಸುತ್ತದೆ.

ಶ್ರೀ ಹನುಮಂತಪ್ಪ

(ಚಿತ್ರದುರ್ಗ ಜಿಲ್ಲೆ)

ಉರುಮೆ ವಾದನ ಕಲಾವಿದರು

'ಹರೆ' 'ಉರುಮೆ' ಎಂಬ ಹೆಸರುಗಳಲ್ಲಿ ಪ್ರಸಿದ್ಧಿ ಪಡೆದಿರುವ ಚರ್ಮವಾದ್ಯ ನಾಡಿನಾದ್ಯಂತ ಹರಡಿಕೊಂಡಿದೆ. ಹಳ್ಳಿಗಳಲ್ಲಿ ಇಂದಿಗೂ ಹೆಸರಾಗಿರುವ 'ಹರಿಗೆ ಕುಣಿಯೋ ಮಾರ್ವನಿಗೆ ಹರೆ ಬಡಿದರೆ ನಿಂತಾಳ' ಎಂಬ ಗಾದೆಮಾತಿದೆ. ಇದು ಹರೆ ಇಲ್ಲವೇ ಉರಿಮೆ ವಾದ್ಯವನ್ನು ಕುರಿತು ವಿವರಿಸುತ್ತದೆ. ಇದು ಏನೇ ಇದ್ದರೂ ಉರುಮೆಯ ವಾದನ ನಮ್ಮ ನಾಡಿನ ಜನಪದ ಸಂಗೀತ ಲೋಕದಲ್ಲಿ ಅದಕ್ಕೆ ವಿಶೇಷ ಮಹತ್ವವಿದೆ. ಅದರಲ್ಲಿ ಆಚರಣೆಗಳ ಪ್ರಪಂಚದಲ್ಲಿ ಅದಕ್ಕೆ ಇನ್ನಿಲ್ಲದಷ್ಟು ಮಹತ್ವವಿದೆ. ಮುಖ್ಯವಾಗಿ ಅದು ಹೆಣ್ಣುದೇವತೆಗಳ, ಗ್ರಾಮದೇವತೆಗಳ ಆರಾಧನೆಯ ಸಂದರ್ಭದಲ್ಲಿ ಹರೆಯ ಬಳಕೆ ಹೆಚ್ಚಾಗಿ ಕಂಡುಬರುತ್ತದೆ. ಇಂತಹ ಆರಾಧನೆಯ ಆಚರಣೆಯ ಸಂದರ್ಭದಲ್ಲಿ ಉರುಮೆ ಬಾರಿಸುವುದು ಎಲ್ಲೆಡೆ ಕಂಡು ಬರುತ್ತದೆ.

ಹೀಗೆ ಉರುಮೆ ಬಾರಿಸುವ ಕಲಾವಿದರೂ ನಾಡಿನಾದ್ಯಂತ ಕಂಡುಬರುತ್ತಾರೆ. ಅಂತಹ ಕಲಾವಿದರಲ್ಲಿ ಶ್ರೀ ಹನುಮಂತಪ್ಪ ಅವರು ಒಬ್ಬರು. ಇವರು ಚಿತ್ರದುರ್ಗ ತಾಲೂಕಿನ ಚೀಳಂಗಿ ಗ್ರಾಮದವರು. ಸದ್ಯ ಎಪ್ಪತ್ತು ವರುಶಗಳನ್ನು ದಾಟಿರುವ ಇವರು ಚಿತ್ರದುರ್ಗ ಪ್ರದೇಶದಲ್ಲಿ ಉರುಮೆ ವಾದನಕ್ಕೆ ಹೆಸರಾದವರು. ತಮ್ಮ ತಂದೆ ಮಾರಪ್ಪ ಅವರಿಂದ ಉರಿಮೆ ಬಾರಿಸುವುದನ್ನು ಕಲಿತ ಶ್ರೀಯುತರು ವೃತ್ತಿ ಮತ್ತು ಹವ್ಯಾಸಿ ಎರಡೂ ರೀತಿಯಲ್ಲಿ ನುಡಿಸುವವರು.

ಇದಲ್ಲದೆ ಹೊರಜಿಲ್ಲೆಗಳಾದ ಶಿವಮೊಗ್ಗ, ದಾವಣಗೆರೆ, ಬಳ್ಳಾರಿಗಳಲ್ಲಿಯೂ ಹತ್ತು ಹಲವು ಕಾರ್ಯಕ್ರಮಗಳಲ್ಲಿ ನೀಡಿದ್ದಾರೆ. ಮೈಸೂರು ದಸರಾ, ಹಂಪಿ ಉತ್ಸವ, ದುರ್ಗೋತ್ಸವ, ಹಂಪಿ ವಿಶ್ವವಿದ್ಯಾಲಯದ ನುಡಿಹಬ್ಬ, ಜನಪದ ಜಾತ್ರೆ, ಶರಣ ಸಂಸ್ಕೃತಿ ಉತ್ಸವ ಹೀಗೆ ಹತ್ತು ಹಲವು ಕಾರ್ಯಕ್ರಮಗಳಲ್ಲಿ ಭಾಗಿಯಾಗಿದ್ದಾರೆ. ಆಕಾಶವಾಣಿಯಲ್ಲಿಯೂ ತಮ್ಮ ಉರುಮೆ ವಾದನದ ಕಾರ್ಯಕ್ರಮ ನೀಡಿದ್ದಾರೆ.

ಇದಲ್ಲದೆ ತಮಗೆ ಕರಗತವಾದ ಈ ಕಲೆಯನ್ನು ಹೊಸತಲೆಮಾರಿನವರಿಗೆ ಕಲಿಸಿಕೊಡುವ ಮೂಲಕ ಉರುಮೆ ಕಲೆಯನ್ನು ಉಳಿಸಿ ಬೆಳೆಸುವ ಕೆಲಸವನ್ನು ಮಾಡುತ್ತಿದ್ದಾರೆ. ಪರಂಪರೆಯ ನಿರ್ಮಾಪಕರಾದ ಇಂತಹ ಮಹನೀಯರಿಗೆ ಈ ಬಾರಿಯ ವಾರ್ಷಿಕ ಪ್ರಶಸ್ತಿ ನೀಡಿ ನೀಡಿ ಗೌರವಿಸಲು ಹರ್ಷವೆನ್ನಿಸುತ್ತದೆ.

ಶ್ರೀ ಟಕೂರಿ ಏಕಾಂತಪ್ಪ

(ದಾವಣಗೆರೆ ಜಿಲ್ಲೆ)

ಶಹನಾಯಿ ಕಲಾವಿದರು

ಕೊಂಬು ಕಹಳೆಗಳು ಜನಪದ ವಾದ್ಯಗಳಲ್ಲಿ ಬಹಳ ಮಹತ್ವವನ್ನು ಪಡೆದಿವೆ. ಇವು ಸಂಗೀತ ಕ್ಷೇತ್ರದಲ್ಲಿ ಮಾತ್ರವಲ್ಲದೆ ಯುದ್ಧಗಳಲ್ಲಿಯೂ ತಮ್ಮದೇ ಆದ ಪಾತ್ರವನ್ನು ನಿರ್ವಹಿಸುತ್ತಿದ್ದವು. ಇಂತಹ ಮಹತ್ವದ ವಾದ್ಯಗಳನ್ನು ನುಡಿಸುವ ಕಲಾವಿದರ ಸಂಖ್ಯೆ ದಿನಗಳು ಉರುಳಿದಂತೆ ಕ್ಷೀಣಿಸುತ್ತಿದೆ. ಹೀಗೆ ಕ್ಷೀಣಿಸುತ್ತಿರುವುದರ ನಡುವೆಯೇ ಅಲ್ಲಲ್ಲಿ ಹಳೆಯ ತಲೆಮಾರಿನ ಕಹಳೆ ಊದುವ ಕಲಾವಿದರೂ ನಮ್ಮ ನಡುವೆ ಇದ್ದಾರೆ.

ಅಂತಹವರಲ್ಲಿ ಶ್ರೀ ಟಕೂರಿ ಏಕಾಂತಪ್ಪನವರು ಒಬ್ಬರು. ಇವರು ದಾವಣಗೆರೆ ಜಿಲ್ಲೆಯ ಜಗಳೂರು ತಾಲ್ಲೂಕಿನ ಬಿದರಕೆರೆ ಗ್ರಾಮದವರು. ಇವರು ಪ್ರಮುಖವಾಗಿ ಶಹನಾಯಿ ಸಂಗೀತಗಾರರು. ಜೊತೆಗೆ ಕಹಳೆಯನ್ನು ಊದುವರು. ಇವರಿಗೆ ಸದ್ಯ ಎಪ್ಪತ್ತು ವರುಶಗಳಾಗಿವೆ. ದಲಿತ ಕುಟುಂಬದ ಹಿನ್ನೆಲೆಯಿಂದ ಬಂದವರು. ವಂಶಪರಂಪರೆಯಿಂದ ಬಂದ ಈ ಕಲೆಯನ್ನು ಕಲಿತು ನುಡಿಸುತ್ತ ಬರುತ್ತಿದ್ದಾರೆ. ಜಿಲ್ಲೆಯಲ್ಲಿ ನಡೆಯುವ ಜನಪದ ಕಾರ್ಯಕ್ರಮಗಳು, ಹಬ್ಬ, ಜಾತ್ರೆ ಹೀಗೆ ಯಾವುದೇ ಬಗೆಯ ಕಾರ್ಯಕ್ರಮಗಳಲ್ಲಿ ಶಹನಾಯಿಯನ್ನು ನುಡಿಸುತ್ತ ಬರುತ್ತಿದ್ದಾರೆ. ಶಹನಾಯಿ ನುಡಿಸುವುದರಲ್ಲಿ ಜಿಲ್ಲೆಯಲ್ಲಿ ಪ್ರಸಿದ್ದ ಹೆಸರು ಏಕಾಂತಪ್ಪನವರದು.

ಇಂತಹ ಕಲಾವಿದರಿಗೆ ದಾವಣಗೆರೆ ಜಿಲ್ಲಾಡಳಿತ 2014ರಲ್ಲಿ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವ ತೋರಿದೆ. ಸದ್ಯ ಇವರಿಗೆ ರಾಜ್ಯ ಜಾನಪದ ಅಕಾಡೆಮಿಯ ವಾರ್ಷಿಕ ಪ್ರಶಸ್ತಿ ನೀಡಿ ಗೌರವಿಸಲು ಸಂತಸವೆನ್ನಿಸುತ್ತದೆ. ಇದರಿಂದ ಪ್ರೇರಣೆ ದೊರೆತು ಮತ್ತಷ್ಟು ಹೊಸತಲೆಮಾರಿನ ಯುವಕರು ಶಹನಾಯಿ ನುಡಿಸುವುದನ್ನು ಕಲಿತು ಈ ಕಲೆಯನ್ನು ಬೆಳೆಸುವಂತಾಗಲಿ ಎಂಬ ಅಪೇಕ್ಷೆ ಇಲ್ಲಿನದು.

ಶ್ರೀಮತಿ ಲಕ್ಷ್ಮಮ್ಮ

(ಕೋಲಾರ ಜಿಲ್ಲೆ)

ಬುರ್ರಕಥೆ ಕಲಾವಿದೆ

ವಾಸ ಇರಲು ಮನೆಯಿಲ್ಲದಿದ್ದರೇನು? ಹಾಡಿಕೊಳ್ಳಲು ವಿಶಾಲ ಮನವಿಲ್ಲವೇನು? ಎಂದು ಯಾರಿಗಾದರೂ ಅನ್ನಿಸಿದರೆ ಅದು ಜನಪದ ಕಲಾವಿದೆ ಶ್ರೀಮತಿ ಲಕ್ಷ್ಮಮ್ಮ(60) ಅವರಿಗೆ ಸರಿಯಾಗಿ ಹೊಂದಿಕೆಯಾಗುತ್ತದೆ. ಇವರು ಕೋಲಾರ ಜಿಲ್ಲೆಯ ಬಂಗಾರ ಪೇಟೆ ತಾಲ್ಲೂಕಿನ ಕಾರಹಳ್ಳಿ ಗ್ರಾಮದವರು. ಇವರು ಅಲೆಮಾರಿ ಸಮುದಾಯಕ್ಕೆ ಸೇರಿದವರು. ಸ್ವಂತ ನೆಲೆಯಿಲ್ಲದೆ ಜೋಪಡಿಗಳಲ್ಲಿ ಜೀವನವನ್ನು ಸಾಗಿಸುತ್ತ ಬಂದವರು. ಸ್ವಂತ ಮನೆಯನ್ನು ಹೊಂದಲು ಹೋರಾಟ ನಡೆಸುತ್ತಲೇ ಬಂದವರು. ಹಾಗಂತ ಮನೆಯನ್ನು ಪಡೆಯುವಲ್ಲಿಯೇ ತಮ್ಮ ಶಕ್ತಿಯನ್ನು ವ್ಯಯಮಾಡದೆ ಕಳೆದ ಮೂವತ್ತು ವರುಶಗಳಿಂದ ಇತರೆ ಕಲಾವಿದರೊಂದಿಗೆ ಕೂಡಿ ಬುರ್ರಕಥೆಯನ್ನು ನಡೆಸುತ್ತ ಬರುತ್ತಿದ್ದಾರೆ. ಕನ್ನಡ ಮತ್ತು ತೆಲುಗು ದ್ವಿಭಾಷಾ ಪ್ರದೇಶದಲ್ಲಿ ಕನ್ನಡ ತೆಲುಗು ಎರಡೂ ಭಾಷೆಗಳಲ್ಲಿ ಜನಪದ ಸಾಹಿತ್ಯದ ಸಂಗೀತದ ಹೊಳೆಯನ್ನು ಹರಿಸುತ್ತಿದ್ದಾರೆ. ಆ ಮೂಲಕ ಕೋಲಾರದ ಸೀಮೆಯಲ್ಲಿ ಜನಪದ ಸಂಗೀತದ ಬೇರುಗಳು ಗಟ್ಟಿಯಾಗಿ ಊರಿ ಅವು ನಿಡುಗಾಲದಲ್ಲಿ ಉಳಿಯುವಂತೆಯೂ ಮಾಡಿದ್ದಾರೆ.

ಶ್ರೀಮತಿ ಲಕ್ಷ್ಮಮ್ಮನವರು ಬುರ್ರಕಥೆ ಮಾತ್ರವಲ್ಲದೆ ಅಲ್ಲದೆ ಸಾಸೂಲು ಚೆನ್ನಮ್ಮ, ಬಾಲನಾಗಮ್ಮ, ನಲ್ಲತಂಗಾ ರಾಜು, ಕಾಂಬೋಜಿ ರಾಜು, ಹಳ್ಳಿ ರಾಣಿ, ಮರಾಠಿಯರ ನಾಟಕ ಮುಂತಾದ ಕಥನ ಗೀತೆಗಳನ್ನು ಕೈವಾರ ತಾತಯ್ಯ ಮುಂತಾದವರ ತತ್ವಪದಗಳನ್ನು ಹಾಡುತ್ತಾರೆ. ಹೀಗೆ ಜನಪದ, ತತ್ವಪದ ಮುಂತಾದ ಹಲವು ಬಗೆಯ ಹಾಡುಗಳನ್ನು ಹಾಡುತ್ತಾರೆ. ಕೋಲಾರ ಮಾತ್ರವಲ್ಲದೆ ನೆರೆ ರಾಜ್ಯಗಳಾದ ಆಂಧ್ರ ಪ್ರದೇಶ ಮತ್ತು ತಮಿಳುನಾಡುಗಳಲ್ಲಿಯೂ ಅನೇಕ ಕಡೆ ಕಾರ್ಯಕ್ರಮಗಳನ್ನು ನೀಡಿ ಪ್ರಸಿದ್ದರಾಗಿದ್ದಾರೆ. ತಮ್ಮ ಹಾಡಿಕೆಯಿಂದ ಕರ್ನಾಟಕ ಆಂಧ್ರ ಮತ್ತು ತಮಿಳುನಾಡುಗಳ ಗಡಿ ಪ್ರದೇಶಗಳಲ್ಲಿ ಮನೆಮಾತಾಗಿದ್ದಾರೆ. ಆ ಮೂಲಕ ನಮ್ಮ ಸಮಾಜದ ಪಾರಂಪರಿಕ ಸಂಸ್ಕೃತಿ, ಸಂಗೀತ, ಸಾಹಿತ್ಯದ ಬೇರುಗಳನ್ನು ಕಾಪಾಡಿಕೊಂಡು ಬರುತ್ತಿದ್ದಾರೆ. ಆಧುನಿಕ ಮಾಧ್ಯಮಗಳ ಪ್ರಭಾವದ ನಡುವೆಯೂ ಇವರು ತಮ್ಮ ಸಂಗೀತ ಸುಧೆಯನ್ನು ಹರಿಸುತ್ತಲೇ ಇದ್ದಾರೆ.

ಇಂತಹ ಜನಕಲಾವಿದೆಗೆ ಕರ್ನಾಟಕ ಸರಕಾರ ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಸದ್ಯ ಅವರಿಗೆ ಪ್ರಸ್ತುತ ಸಾಲಿನ ಜಾನಪದ ಅಕಾಡೆಮಿಯ ವಾರ್ಷಿಕ ಪ್ರಶಸ್ತಿಯನ್ನು ನೀಡಿ ಗೌರವಿಸಲು ಸಂತೋಷವೆನ್ನಿಸುತ್ತದೆ.

ಶ್ರೀ ಲಿಂಗಪ್ಪ ಜೋಗಿ

(ಶಿವಮೊಗ್ಗ ಜಿಲ್ಲೆ):
ಕಿನ್ನರಿಜೋಗಿ ಕಲಾವಿದರು

ಜೋಗಿಗಳು ಜನಪದರಲ್ಲಿ ಸಂಚಲನವನ್ನೇ ಮೂಡಿದ್ದಾರೆ. ಇವರ ಸುತ್ತ ದಂತ ಕಥೆಗಳೇ ಹುಟ್ಟಿಕೊಂಡಿವೆ. ಆಧುನಿಕ ಸಾಹಿತ್ಯದಲ್ಲಿ ಮಾಸ್ತಿಯಂತವರು 'ಜೋಗ್ಯೋರ ಅಂಜಪ್ಪನ ಕೋಳಿಕತೆ' ಎಂಬ ಕಥೆಯನ್ನೇ ಬರೆದು ಜೋಗಿಗಳು ಸಮಾಜದಲ್ಲಿ ಉಂಟುಮಾಡಿರುವ ಪರಿಣಾಮವನ್ನು ಚಿತ್ರಿಸಿದ್ದಾರೆ. ಜೋಗಿಗಳನ್ನು ಕುರಿತು ಹಾಡುಗಳು ಹುಟ್ಟಿಕೊಂಡಿವೆ. 'ಎಲ್ಲೋ ಜೋಗಪ್ಪ ನಿನ್ನರಮನೆ' ಎಂಬ ಹಾಡುಗಳು ಹುಟ್ಟಿವೆ. ಅಂದರೆ ಜೋಗಿಗಳ ಸಾಮಾಜಿಕ ಪರಿಣಾಮವನ್ನು ಕುರಿತ ಸಾಹಿತ್ಯವೇ ಹುಟ್ಟಿಕೊಂಡಿದೆ.

ಈ ಬಗೆಯಲ್ಲಿ ಬೇರೆ ಯಾವ ಹಾಡುಗಾರರ ಬಗೆಗೂ ಇಂತಹ ಸಾಹಿತ್ಯ ಹುಟ್ಟಿಕೊಂಡಿದ್ದರೂ ಅಷ್ಟು ಪ್ರಸಿದ್ಧವಿಲ್ಲ. ಇಂತಹದಕ್ಕೆ ಮುಖ್ಯ ಕಾರಣವಾಗಿರುವುದೇ ಸಂಗೀತ. ಇದು ಜೋಗಿಗಿಂತ ಸಂಗೀತದ್ದೇ ಹೆಚ್ಚುಗಾರಿಕೆಯಿದೆ. ಇದರ ಜೊತೆಗೆ ಬೆರೆತುಕೊಂಡ ಜೋಗಿ ಸೇರಿಕೊಂಡಿರುವುದು ಒಟ್ಟು ಚಿತ್ರಣವನ್ನೇ ಬದಲಿಸಿದೆ.

ಇಂತಹ ಸಾಮಾಜಿಕ ಮಹತ್ವ ಹೊಂದಿರುವ ಜೋಗಿಗಳಿಗೆ ಒಂದು ದೀರ್ಘಪರಂಪರೆಯೇ ಇದೆ. ಅಂತಹ ಪರಂಪರೆಯಲ್ಲಿ ಬಂದವರೆ ಶ್ರೀ ಲಿಂಗಪ್ಪ ಜೋಗಿ(66). ಇವರು ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕಿನ ಆನಂದಪುರದವರು. ಕಳೆದ 40 ವರುಶಗಳಿಂದ ಹಾಡುತ್ತ ಜನಪದ ಸಂಗೀತ ಕ್ಷೇತ್ರದಲ್ಲಿ ಹೆಸರಾಗಿದ್ದಾರೆ. ಜೋಗಿ ಪದ, ತತ್ವಪದ, ಗೀಗೀ ಪದ ಮುಂತಾದವುಗಳನ್ನು ಕಲಿತು ಹಾಡುತ್ತ ಬರುತ್ತಿದ್ದಾರೆ. ಊರೂರು ಸುತ್ತುತ್ತ ಹಾಡುತ್ತ ತಮ್ಮ ಹಾಡಿಕೆಯ ಪ್ರವೃತ್ತಿಯನ್ನು ಮುಂದುವರೆಸಿಕೊಂಡು ಬರುತ್ತಿದ್ದಾರೆ.

ಇವರ ಹಾಡುವ ಸಾಮರ್ಥ್ಯವನ್ನು ಗುರುತಿಸಿದ ಅನೇಕ ಸಂಘ ಸಂಸ್ಥೆಗಳು, ಸರಕಾರಿ ಇಲಾಖೆಗಳು ಇವರಿಗೆ ಹಾಡಲು ಅವಕಾಶ ಕಲ್ಪಿಸಿಕೊಟ್ಟಿವೆ. ಸಹ್ಯಾದ್ರಿ ಉತ್ಸವ, ಜಾನಪದ ಜಾತ್ರೆ, ಕನ್ನಡ ಸಾಹಿತ್ಯ ಸಮ್ಮೇಳನ, ಜಾನಪದ ಸಂಭ್ರಮ ಹೀಗೆ ನೂರಾರು ಕಾರ್ಯಕ್ರಮಗಳಲ್ಲಿ ತಮ್ಮ ಗಾಯನ ಪ್ರತಿಭೆಯನ್ನು ಪ್ರದರ್ಶಿಸಿದ್ದಾರೆ. ಜನರ ಮನಸ್ಸನ್ನು ಸೂರೆಗೊಂಡಿದ್ದಾರೆ.

ಇಂತಹ ಜನಪ್ರಿಯ ಜನಮನದ ಗಾಯಕರಿಗೆ 'ಬಸವಜ್ಯೋತಿ–2011' ಪ್ರಶಸ್ತಿ, 'ಕಲಾಭಾರತಿ' ಪ್ರಶಸ್ತಿಗಳು ದೊರೆತಿವೆ. ಅನೇಕ ಸಂಘಸಂಸ್ಥೆಗಳು ಅವರನ್ನು ಸನ್ಮಾನಿಸಿವೆ. ಈಗ ಕರ್ನಾಟಕ ಜಾನಪದ ಅಕಾಡೆಮಿಯು ಈ ಸಾಲಿನ ವಾರ್ಷಿಕ ಪ್ರಶಸ್ತಿ ನೀಡಿ ಗೌರವಿಸಲು ಹೆಮ್ಮೆಪಡುತ್ತದೆ.

ಶ್ರೀಮತಿ ಕೆಂಗಮ್ಮ

(ತುಮಕೂರು ಜಿಲ್ಲೆ)
ಕಾಡುಗೊಲ್ಲರ ಪದಗಳು

ಕಾಡುಗೊಲ್ಲ ಸಮುದಾಯವು ಇಂದಿಗೂ ತನ್ನ ಬುಡಕಟ್ಟು ಸಂಸ್ಕೃತಿಯ ಹಲವು ಚಹರೆಗಳನ್ನು ಉಳಿಸಿಕೊಂಡು ಬಂದಿದೆ. ಪಶುಪಾಲನೆಯಿಂದ ಇಂದು ದೂರ ಸರಿದಿದ್ದರೂ ಕೂಡ ಪಶುಪಾಲನಾ ಸಮಾಜದ ಹಲವು ಆಚರಣೆಗಳ ಚಹರೆಗಳನ್ನು ಪಾಲಿಸಿಕೊಂಡು ಬರುತ್ತಿದ್ದೆ. ಅಂತಹದ್ದರಲ್ಲಿ ಅಲ್ಲಿನ ಜನಪದ ಸಂಗೀತವೂ ಒಂದು. ಹೊಸ ತಲೆಮಾರು ಇದರಿಂದ ಸಂಪೂರ್ಣ ದೂರ ಸರಿಯುತ್ತಿದ್ದರೂ ಹಳೆಯ ತಲೆಮಾರಿನ ಕೆಲಸವು ಇನ್ನೂ ಅದನ್ನು ಜೀವಂತವಾಗಿರಿಸಿದ್ದಾರೆ.

ಅಂತಹವರಲ್ಲಿ ಶ್ರೀಮತಿ ಕೆಂಗಮ್ಮ ಕೂಡ ಒಬ್ಬರು. ಇವರು ಕಾಡುಗೊಲ್ಲ ಸಮುದಾಯಕ್ಕೆ ಸೇರಿದ ಹಿರಿಯ ಮಹಿಳೆ. ಈಗ ಇವರಿಗೆ 90 ವರುಶಗಳು ತುಂಬಿವೆ. ಇವರು ತುಮಕೂರು ಜಿಲ್ಲೆ ಮಧುಗಿರಿ ತಾಲ್ಲೂಕು ಪಡಸಾಲ ಹಟ್ಟಿ ಗ್ರಾಮದವರು. ತಂದೆ ಚಿತ್ತೇಗೌಡ ತಾಯಿ ದೊಡ್ಡಮ್ಮ. 16ನೆಯ ವಯಸ್ಸಿಗೆ ಮದುವೆಯಾಯಿತು. ಇವರ ಪತಿ ಕರಿಯಣ್ಣ. ಇವರು ತಮ್ಮ ಅತ್ತೆ ಬೊಮ್ಮಕ್ಕ ಸಿತ್ತಮ್ಮನವರಿಂದ ಹಾಡುವುದನ್ನು ಕಲಿತವರು. ಮುಖ್ಯವಾಗಿ ಕರಡಿ ಗೊಲ್ಲರ ಬೆಡಗಿನ ಕಾಟಮ್ಮನ ಹಾಡು ಹಾಡುತ್ತಾರೆ. ಇವರ ನೆನಪಿನ ಬುತ್ತಿಯಲ್ಲಿ ಕಾಡುಗೊಲ್ಲ ಸಮುದಾಯದ ಹಲವು ಕಥನಗಳಿವೆ.

ಇವರು ತಮ್ಮ ಮನೆದೇವರುಗಳಾದ ಚಿತ್ರದೇವರು ಕರಿಯಮ್ಮ ಅವರನ್ನು ಕುರಿತು ಹಾಡುತ್ತಾರೆ. ಅಲ್ಲದೆ ಸೋಬಾನೆ ಪದಗಳು, ಒಗಟುಗಳು, ಜನಪದ ಕಥೆಗಳು, ಒಸಗೆ ಪದಗಳು, ಬೀಸುವ ಹಾಡುಗಳು ಇತ್ಯಾದಿಗಳನ್ನು ಹಾಡುತ್ತಾರೆ. ಹೀಗೆ ಹಲವು ಬಗೆಯ ಜನಪದ ಅಭಿವ್ಯಕ್ತಿಯಲ್ಲಿ ತೊಡಗಿರುವ ಅವರು ಕನ್ನಡ ಜನಪದ ಕಲಾವಿದರಲ್ಲಿ ಹಿರಿಯ ಕಲಾವಿದೆ. ಇವರಿಗೆ ಜನಪದ ಲೋಕ 'ಲಕ್ಷ್ಮಮ್ಮ ನಾಗೇಗೌಡ' ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ. ಸದ್ಯ ಇಂತಹ ಹಿರಿಯ ಕಲಾವಿದರಿಗೆ ಅಕಾಡೆಮಿಯ ವಾರ್ಷಿಕ ಪ್ರಶಸ್ತಿ ನೀಡಿ ಗೌರವಿಸಲು ಹೆಮ್ಮೆಯೆನಿಸುತ್ತದೆ.

ಶ್ರೀ ದೊಡ್ಡನರಸಪ್ಪ

(ಚಿಕ್ಕಬಳ್ಳಾಪುರ ಜಿಲ್ಲೆ)

ತಮಟೆ ವಾದನ

ತಮಟೆಯ ಸದ್ದು ಕೇಳದ ಊರುಗಳೇ ಇಲ್ಲ. ಅದು ಬಹುತೇಕ ಎಲ್ಲ ಊರುಗಳಲ್ಲಿ ಸಾಮಾನ್ಯವಾಗಿ ಬಳಕೆಯಾಗುವ ಒಂದು ಸಂಗೀತ ಪರಿಕರ. ಮತ್ತು ಅದು ಅತ್ಯಂತ ಪ್ರಾಚೀನವಾದ ಒಂದು ಪರಿಕರವೂ ಹೌದು. ಹಬ್ಬ ಜಾತ್ರೆ ಮದುವೆ ಸಾವು ಹೀಗೆ ಎಲ್ಲ ಬಗೆಯ ಸಂದರ್ಭಗಳಲ್ಲಿ ಅದನ್ನು ಬಳಸಲಾಗುತ್ತದೆ. ಮತ್ತು ಇಂತಹ ಜನಪ್ರಿಯ ವಾದ್ಯ ನುಡಿಸುವ ಕಲೆ ಮಾತ್ರ ಅದು ಎಲ್ಲರೂ ನುಡಿಸುವಂತಾಗದೆ ಇಂದಿಗೂ ಉಳಿದಿರುವುದು ನಮ್ಮ ಸಮಾಜದ ಅಸಮಾನತೆಯ ಬೇರುಗಳು ಆಳವಾಗಿ ಬೇರೂರಿರುವುದರ ಸಂಕೇತ.

ತಮಟೆ ಇಂದಿಗೂ ದಲಿತರು ಮಾತ್ರ ನುಡಿಸುವ ಒಂದು ವಾದ್ಯವಾಗಿದೆ. ಎಲ್ಲೊ ಕೆಲವರು ಮಾತ್ರ ಪ್ರಯೋಗಾರ್ಥವಾಗಿ ದಲಿತರಲ್ಲದವರು ತಮಟೆ ಬಾರಿಸುತ್ತಾರೆ. ಉಳಿದಂತೆ ಅದು ಇಂದಿಗೂ ದಲಿತ ಸಮುದಾಯದ ಅನನ್ಯತೆಯಂತೆಯೇ ಉಳಿದುಕೊಂಡು ಬರುತ್ತಿದೆ. ಅದನ್ನು ಬಿಟ್ಟುಕೊಡಲು ಮುಂದಾಗುವ ಊರುಗಳಲ್ಲಿ ದಲಿತರ ಮೇಲೆ ಹಲ್ಲೆಗಳು ನಡೆದಿವೆ. ಅದೊಂದು ಗಂಭೀರ ಸಾಮಾಜಿಕ ಸಮಸ್ಯೆಯಾಗಿಯೂ ಬೆಳೆದಿದೆ. ಅಂದರೆ ಬದಲಾವಣೆ ಬಯಸುವ ದಲಿತರನ್ನು ಮತ್ತೆ ಹಳೆಯ ಆಚರಣೆಗಳಿಗೆ ಬಂಧಿಸಿಡುವ ಪ್ರಯತ್ನವೂ ಇಂತಹ ಕಡೆಗಳಲ್ಲಿ ನಡೆಯುತ್ತಿದೆ.

ಇಂತಹ ಎಷ್ಟೋ ಸಂಗತಿಗಳು ಇದರ ಸುತ್ತ ಸುತ್ತಿಕೊಂಡಿದ್ದರು ತಮಟೆ ಮಾತ್ರ ತನ್ನ ಜನಪ್ರಿಯತೆಯನ್ನು ಕಳೆದುಕೊಂಡಿಲ್ಲ. ಅಂತಹ ಜನಪ್ರಿಯ ಕಲೆಯ ಹಾದಿಯಲ್ಲಿ ಅದೇಷ್ಟೋ ಕಲಾವಿದರು ಬಂದುಹೋಗಿದ್ದಾರೆ. ಅದನ್ನು ಮುಂದುವರೆಸಿದ್ದಾರೆ. ಅಂತಹವರಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆ ಚಿಂತಾಮಣಿ ತಾಲೂಕು ಮುರುಗಮಲ್ಲಾ ಹೋಬಳಿಯ ಪೆದ್ದೂರಿನ ದೊಡ್ಡನರಸಿಂಹಪ್ಪ ಕೂಡ ಒಬ್ಬರು. ಸದ್ಯ ಇವರಿಗೆ 75ವರುಶಗಳು ತುಂಬಿವೆ. ಬಡತನದ ಕುಟುಂಬದಲ್ಲಿ ಜನಿಸಿದ ಇವರು ಅನಕ್ಷರಸ್ಥರು. ಹೊಟ್ಟೆಪಾಡಿಗಾಗಿ ಜೀತ ಮತ್ತು ಕೂಲಿ ಕೆಲಸಗಳನ್ನು ಆಧರಿಸಿ ಬಾಳುವೆ ಮಾಡಿದವರು. ದುಡಿತದ ಮಧ್ಯೆಯೇ ಎಳೆಯರಾಗಿದ್ದಾಗ ಊಟದ ತಟ್ಟೆಗಳನ್ನೇ ತಮಟೆಯಾಗಿ ಭಾವಿಸಿ ಅಭ್ಯಾಸ ಮಾಡಿ ಕಲಿತವರು.

ನಂತರ ತಮಟೆ ಬಾರಿಸುವ ಒಂದು ತಂಡ ಕಟ್ಟಿಕೊಂಡು ಹಬ್ಬ, ಜಾತ್ರೆ, ಮೊಹರಂ, ಸಾವು ಹೀಗೆ ಹಲವು ಕಾರ್ಯಕ್ರಮಗಳಲ್ಲಿ ಬಾರಿಸಿದವರು. ಆ ಮೂಲಕ ತಮಟೆ ಬಾರಿಸುವ ಕಲೆಯನ್ನು ಬೆಳೆಸಿದವರು. ಇಂತಹ ಹಿರಿಯ ಕಲಾವಿದರೆ ಈ ಬಾರಿಯ ಅಕಾಡೆಮಿಯ ವಾರ್ಷಿಕ ಪ್ರಶಸ್ತಿ ನೀಡಿ ಗೌರವಿಸಲು ಹೆಮ್ಮೆಯೆನಿಸುತ್ತದೆ.

ಶ್ರೀಮತಿ ಚಿಕ್ಕತಾಯಮ್ಮ

(ರಾಮನಗರ ಜಿಲ್ಲೆ)

ಸೋಬಾನೆ ಗಾಯನ

'ಸೋ ಎನ್ನಿರೆ ಸೋಬಾನೆ ಎನ್ನಿರೆ' ಎನ್ನದ ಜನಪದರ ಜೀವನವೇ ಇಲ್ಲ. ಅಷ್ಟರಮಟ್ಟಿಗೆ ಸೋಬಾನೆ ಹಾಡುಗಳು ಜನಮನವನ್ನು ಅವರ ಆಚರಣೆಯ ಲೋಕವನ್ನು ಆವರಿಸಿವೆ. ಇಂದು ಸಮಾಜದ ಆಚರಣೆಯ ಲೋಕದಲ್ಲಿ ಅನೇಕ ಬದಲಾವಣೆಗಳು ಕಾಣಿಸಿಕೊಂಡಿದ್ದರೂ ಮದುವೆ ಒಸಗೆ ಮುಂತಾದ ಸಮಾರಂಭಗಳಲ್ಲಿ ಸೋಬಾನೆ ಹಾಡಿನ ಸೊಲ್ಲು ಕೇಳಿಬರುತ್ತಲೇ ಇದೆ. ಅಂತಹ ಅನುರಣವನ್ನು ಅನುರಣಿಸುವ ಗಾಯಕಿಯರು ಅಸಂಖ್ಯ. ಅಂತಹವರಲ್ಲಿ ರಾಮನಗರ ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕಿನ ಅಪ್ಪಗೆರೆ ಗ್ರಾಮದವರಾದ ತಾಯಮ್ಮನವರು ಒಬ್ಬರು. ಇವರು ಸೋಬಾನೆ ಪದಗಳ ಹೆಸರಾಂತ ಗಾಯಕಿ. ಇವರು ಆಕಾಶವಾಣಿಯಲ್ಲಿಯೂ ಹಾಡಿದ್ದಾರೆ. ಹಲವು ಸೋಬಾನೆ ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನವನ್ನು ಪಡೆದಿದ್ದಾರೆ. ಸರಕಾರದ ಮಾಸಿಕ ವೇತನ ಪಡೆಯುತ್ತಿದ್ದಾರೆ. ಇಂತಹ ಅಪ್ಪಟ ದೇಸೀ ಪ್ರತಿಭೆಗೆ ಈ ಸಾಲಿನ ಜಾನಪದ ಅಕಾಡೆಮಿ ವಾರ್ಷಿಕ ಪ್ರಶಸ್ತಿ ನೀಡಿ ಗೌರವಿಸಲು ಸಂಭ್ರಮವೆನ್ನಿಸುತ್ತದೆ.

ಶ್ರೀಮತಿ ತುಳಸಾಬಾಯಿ

(ಬಾಗಲಕೋಟೆ)

ತತ್ವಪದ ಕಲಾವಿದೆ

ಉತ್ತರ ಕರ್ನಾಟಕದಲ್ಲಿ ಭಜನೆ, ಕೀರ್ತನೆಗಳು, ತತ್ವಪದಗಳ ಹಾಡುಗಾರಿಕೆ, ಹಂತಿಪದಗಳ ಗಾಯನ, ಮೊಹರಂ ಪದಗಳು ಮುಂತಾದ ಹಲವು ಬಗೆಯ ಹಾಡುಗಳ ಹಾಡುವಿಕೆ ವ್ಯಾಪಕವಾಗಿ ನಡೆದಿವೆ. ಕಿರಿಯರು ಇದರಲ್ಲಿ ಕಡಿಮೆ ತೊಡಗುತ್ತಿದ್ದಾರೆ ಎಂದಾಗಲೂ ಕೂಡ ಈ ಎಲ್ಲ ಪ್ರಕಾರಗಳು ಕರ್ನಾಟಕದಲ್ಲಿ ಜೀವಂತವಾಗಿರುವುದನ್ನು ಕಾಣಬಹುದು. ಮತ್ತು ಜನಪದ ಪರಂಪರೆಯ ಒಂದು ಬಾಗ ಮುಂದುವರೆದುಕೊಂಡು ಹೋಗುತ್ತಿರುವುದನ್ನು ಕಾಣಬಹುದು. ಮತ್ತು ಇವುಗಳ ಹಾಡುವಿಕೆಯಲ್ಲಿ ಇಂದಿಗೂ ಒಂದು ಬಗೆಯ ತಲ್ಲೀನತೆಯಿದೆ. ಅಂದರೆ ಅದನ್ನು ಕೇವಲ ಪರಂಪರೆಯದು ಎಂಬ ನಂಬಿಕೆಯ ಕಾರಣಕ್ಕಾಗಿ ಮಾತ್ರವಲ್ಲದೆ ಅದರಲ್ಲಿ ಆಳವಾದ ಶ್ರದ್ಧೆ ಇರುವ ಜನರು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ.

ಇಂತಹ ಹಾಡಿಕೆಯ ಪರಂಪರೆಯಲ್ಲಿ ದಶಕಗಳ ಕಾಲದಿಂದ ತಮ್ಮನ್ನು ತೊಡಗಿಕೊಂಡಿರುವವರೇ ಶ್ರೀಮತಿ ತುಳಸಾಬಾಯಿ ರಾ. ಪೂಜಾರಿಯವರು. ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲೂಕಿನ ಹಿಪ್ಪರಗಿಯವರಾದ ತುಳಸಾಬಾಯಿಯವರು ಯಲ್ಲಪ್ಪ ಕುರುಬರ ಮತ್ತು ತಾಯಿ ಬಾಗವ್ವ ಕುರುಬರ ದಂಪತಿಗಳ ಮಗಳಾಗಿ ಹುಟ್ಟಿದವರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟ ಜಾನಪದ ಪರಿಷತ್ತು, ಜಾನಪದ ಅಕಾಡೆಮಿ, ವಾರ್ತಾ ಇಲಾಖೆ, ಕನ್ನಡ ಸಾಹಿತ್ಯ ಪರಿಷತ್ತು, ಆಕಾಶವಾಣಿಗಳು ಆಯೋಜಿಸಿದ್ದ ಅನೇಕ ಕಾರ್ಯಕ್ರಮಗಳಲ್ಲಿ ತತ್ವಪದಗಳನ್ನು ಹಾಡಿದ್ದಾರೆ. ಚಾಲುಕ್ಯ ಉತ್ಸವ, ರನ್ನ ವೈಭವ, ಜಾನಪದ ಕಲಾಮೇಳಗಳನ್ನು ಒಳಗೊಂಡಂತೆ ಅನೇಕ ಕಾರ್ಯಕ್ರಮಗಳಲ್ಲಿ ಹಾಡಿದ್ದಾರೆ. ಆಕಾಶವಾಣಿ ಕಲಾವಿದೆಯಾಗಿಯೂ ಪ್ರಸಿದ್ದರಾಗಿದ್ದಾರೆ. ಇವರು ಹಾಡಿರುವ ಹಲವು ಧ್ವನಿಸುರಳಿಗಳು ಬಿಡುಗಡೆಯಾಗಿವೆ.

ಶ್ರೀಮತಿ ತುಳಸಾಬಾಯಿ ಅವರಿಗೆ ಈ ಬಾರಿಯ ಅಕಾಡೆಮಿ ವಾರ್ಷಿಕ ಪ್ರಶಸ್ತಿಯನ್ನು ನೀಡಿ ಗೌರವಿಸಲು ಸಂತೋಷ ಎನ್ನಿಸುತ್ತದೆ.

ಶ್ರೀಮತಿ ಕಸ್ತೂರವ್ವ ರಾವಪ್ಪ

(ಬೆಳಗಾವಿ ಜಿಲ್ಲೆ)

ಗೀಗಿ ಪದ

ಗೀಗೀ ಪದಗಳು ಉತ್ತರ ಕರ್ನಾಟಕದ ಪ್ರಮುಖ ಹಾಡಿನ ಬಗೆ. ಇದು ಬಹಳ ಜನಪ್ರಿಯವಾದುದು. ಲಾವಣಿ ಬಗೆಯ ಈ ಹಾಡಿನ ಪ್ರಕಾರ ಸಾಮಾಜಿಕ ಜಾಗೃತಿಗೆ ಹೆಚ್ಚು ಬಳಕೆಯಾಗುತ್ತಿದೆ. ತನ್ನ ಹಳೆಯ ಚರರೆಯನ್ನು ಉಳಿಸಿಕೊಂಡೇ ಹೊಸ ಕಾಲದ ವಿಚಾರಗಳನ್ನು ಮೈಗೂಡಿಸಿಕೊಂಡು ಹಾಡಿಕೆಯ ಪ್ರಕಾರವಾಗಿ ಬೆಳೆದಿದೆ.

ಹೀಗೆ ಗೀಗಿ ಪದಗಳ ಹಾಡಿನ ಪ್ರಕಾರವನ್ನು ಬೆಳೆಸಿದವರಲ್ಲಿ ಶ್ರೀಮತಿ ಕಸ್ತೂರೆವ್ವ ರಾವಪ್ಪ ಮುಶಣ್ಣವರ ಒಬ್ಬರು. ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲೂಕಿನ ಹುಲಕುಂದ ಗ್ರಾಮದವರು. ಇವರಿಗೀಗ 63 ವರುಶಗಳಾಗಿವೆ. ದಲಿತ ಕುಟುಂಬದಲ್ಲಿ ಹುಟ್ಟಿ ಬೆಳೆದ ಇವರು ಔಪಚಾರಿಕ ಶಿಕ್ಷಣವನ್ನು ಪಡೆದವರಲ್ಲ. ಇವರು ವಯಸ್ಕರ ಶಿಕ್ಷಣ ಕೇಂದ್ರಗಳ ಮೂಲಕ ಅಕ್ಷರಾಭ್ಯಾಸ ಕಲಿತವರು. ಶಿಕ್ಷಣದ ಕೊರತೆ ಅವರ ಹಾಡುವಿಕೆಗೆ ಎಂದೂ ತೊಂದರೆಯನ್ನೂ ಕೊಟ್ಟಿಲ್ಲ. ಬದಲಿಗೆ ಗೀಗಿ ಪದಗಳನ್ನು ತಮ್ಮ ಹಿರಿಯರಿಂದ ಕಲಿತು ಹಾಡಿದರು. ಅಲ್ಲದೆ ಹಾಡುವುದರಲ್ಲಿ ಹೊಸ ಹೊಸ ಪ್ರಯೋಗಗಳನ್ನು ಮಾಡುತ್ತ ಅದನ್ನು ಬೆಳೆಸಿ ತಾವು ಬೆಳೆದಿದ್ದಾರೆ. ಇವರು ಬಸಪ್ಪ ಮತ್ತು ತಿಪ್ಪಣ್ಣ ಎಂಬ ಇಬ್ಬರು ಕಲಾವಿದರೊಂದಿಗೆ ಒಂದು ತಂಡವಾಗಿ ಹಾಡಿ ಗೀಗಿ ಪದಗಳ ಹಾಡಿಕೆಗೆ ಹೊಸ ಶಕ್ತಿ ತುಂಬಿದ್ದಾರೆ.

ಜನರ ಜೊತೆಗೆ ಇದ್ದು ಹಾಡುತ್ತ ಜನಮನವನ್ನು ಎಚ್ಚರಿಸಿದವರು. ಸ್ಥಳೀಯವಾಗಿ ನಡೆವ ವಿವಿಧ ಸಭೆ ಸಮಾರಂಭಗಳಲ್ಲಿ ಹಾಡುತ್ತಲೇ ದೂರದ ಧಾರವಾಡ, ಮಡಿಕೇರಿ, ಭದ್ರಾವತಿ ಆಕಾಶವಾಣಿ ಕೇಂದ್ರಗಳಿಂದಲೂ ಕಾರ್ಯಕ್ರಮ ನೀಡಿದ್ದಾರೆ. ಕಳೆದ ಮೂರು ದಶಕಗಳಿಂದ ಗೀಗಿಪದಗಳನ್ನು ಹಾಡುತ್ತ ಬರುತ್ತಿದ್ದಾರೆ. ಕರ್ನಾಟಕ ಜಾನಪದ ಅಕಾಡೆಮಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಡೆಸಿದ ಗಡಿನಾಡು ಉತ್ಸವ, ಕಿತ್ತೂರು ಉತ್ಸವ, ವಿಶ್ವಕನ್ನಡ ಸಮ್ಮೇಳನ ಹಾಗೂ ರಾಜ್ಯಮಟ್ಟದ ಜನಪದ ಕಲಾಮೇಳಗಳು, ಹೀಗೆ ಹತ್ತು ಹಲವೆಡೆ ತಮ್ಮ ಕಾರ್ಯಕ್ರಮ ನೀಡಿದ್ದಾರೆ. ಆರೋಗ್ಯ ಇಲಾಖೆ, ವಾರ್ತಾ ಇಲಾಖೆ ನೆಹರು ಯುವ ಕೇಂದ್ರ, ಕೃಷಿ ಇಲಾಖೆ, ಪರಿಸರ ಇಲಾಖೆಗಳು ಹಮ್ಮಿಕೊಂಡಿದ್ದ ಅನೇಕ ಜಾಗೃತಿ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಗೀಗಿಪದಗಳ ಮೂಲಕ ಜಾಗೃತಿ ಮೂಡಿಸಲು ಶ್ರಮಿಸಿದ್ದಾರೆ.

ಹಾಡುವುದರ ಮೂಲಕ ಸಮಾಜಕ್ಕೆ ನೀಡಿದ ಕಾಣಿಕೆಯನ್ನು ಪರಿಗಣಿಸಿ ಬೆಳಗಾವಿ ಜಿಲ್ಲೆ ಜಾನಪದ ಪರಿಷತ್ತಿನಿಂದ 'ಸಿರಿಗಂಧ' ಪ್ರಶಸ್ತಿ, ನೀಡಿ ಗೌರವಿಸಲಾಗಿದೆ. ಹಾಗೆಯೇ 'ಜಯಶ್ರೀ ಗುತ್ತಲ ಜಾನಪದ ಪುರಸ್ಕಾರ–2014' ದೊರೆತಿದೆ. ಹಾಗೂ ವಿವಿಧ ಸಂಘ ಸಂಸ್ಥೆಗಳಿಂದ ಗೌರವ ಪುರಸ್ಕಾರಗಳನ್ನು ಪಡೆದಿದ್ದಾರೆ. ಸದ್ಯ ಇಂತಹ ಜನಪ್ರಿಯ ಕಲಾವಿದೆಗೆ ಅಕಾಡೆಮಿಯ ವಾರ್ಷಿಕ ಪ್ರಶಸ್ತಿ ನೀಡಿ ಗೌರವಿಸಲು ಸಂತಸವೆನ್ನಿಸುತ್ತದೆ.

ಶ್ರೀ ರಘುನಾಥ ಭಾ. ಬಾಣಕೋಲ

(ವಿಜಯಪುರ)

ಜಾನಪದ ಗಾಯನ

ಶ್ರೀ ರಘುನಾಥ ಭಾ ಬಾಣಕೋಲ ಅವರು ವಿಜಯಪುರ ಜಿಲ್ಲೆಯ ಇಂಡಿ ತಾಲೂಕಿನ ಅಥರ್ಗಾ ಗ್ರಾಮದವರು. ಭಾಗಪ್ಪ ಮತ್ತು ಸುಂದರಾಬಾಯಿ ದಂಪತಿಗಳ ಮಗನಾಗಿ ಆಗಸ್ಟ್ 8, 1959ರಲ್ಲಿ ಹುಟ್ಟಿದವರು. ದಲಿತ ಸಮುದಾಯಕ್ಕೆ ಸೇರಿದವರು. ಕಳೆದ 40 ವರುಶಗಳಿಂದ ಹಾಡುತ್ತಿದ್ದಾರೆ. ಹಾಡುವುದು ಮಾತ್ರವಲ್ಲದೆ ನಾಟಕ ರಚನೆ, ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಅಲ್ಲದೆ ಹೋರಾಟದ ಗೀತೆಗಳ ರಚನೆಗಳಲ್ಲಿಯೂ ಇವರು ನಿಪುಣರು.

ಹೀಗೆ ಹಾಡುವುದು ಮತ್ತು ಬರೆಯುವ ಎರಡೂ ಕಲೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಕಲಾಸೇವೆ ಮಾಡುತ್ತಿದ್ದಾರೆ. ತಮ್ಮ ಕಲಾಸೇವೆಗೆ ವಿಜಯಪುರ, ಕಲಬುರಗಿ ಹಾಗೂ ಹಾವೇರಿ ಜಿಲ್ಲೆಗಳನ್ನು ಕೇಂದ್ರವಾಗಿಸಿಕೊಂಡಿದ್ದಾರೆ. ವಿವಿಧ ಸಂಘಸಂಸ್ಥೆಗಳ ಸ್ಥಾಪಕರಾಗಿ ಅಧ್ಯಕ್ಷರಾಗಿ ಕೆಲಸ ಮಾಡುತ್ತಿದ್ದಾರೆ. ಹಲವು ಚಟುವಟಿಕೆಗಳ ಸಂಘಟಕರೂ ಆಗಿದ್ದಾರೆ. ಬೆಂಗಳೂರು ಮೈಸೂರು ಮುಂತಾದ ಬೇರೆ ಬೇರೆ ನಗರಗಳಲ್ಲಿ ಹಲವು ನಾಟಕಗಳನ್ನು ಪ್ರದರ್ಶಿಸಿದ್ದಾರೆ. ಬಹಮುಖಿ ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಸಾಹಿತ್ಯ ಸಮಾಜ ಮತ್ತು ಕಲಾಸೇವೆ ಮಾಡುತ್ತಿದ್ದಾರೆ. ಇಂತಹ ಮಹನೀಯರಿಗೆ ಪ್ರಸಕ್ತ ಸಾಲಿನ ಅಕಾಡೆಮಿಯ ವಾರ್ಷಿಕ ಪ್ರಶಸ್ತಿ ನೀಡಿ ಗೌರವಿಸಲು ಖುಷಿಯೆನ್ನಿಸುತ್ತದೆ.

ಶ್ರೀ ಜೆ. ಯಲ್ಲಪ್ಪ ದರೋಜೆ

(ಧಾರವಾಡ ಜಿಲ್ಲೆ)

ಜನಪದ ವೈದ್ಯ

ಜನರ ಆರೋಗ್ಯ ಕಾಪಾಡುವ ನೆಪದಲ್ಲಿ ಆಧುನಿಕ ವೈದ್ಯರಯ ಆಸ್ಪತ್ರೆಗಳ ಜನರನ್ನು ಅಕ್ಷರಶಹ ಸುಲಿಗೆ ಮಾಡುತ್ತಿದ್ದಾರೆ. ಹೀಗೆ ಮಾಡುವುದನ್ನೇ ತರಬೇತಿ ನೀಡುವ ಪದ್ಧತಿಯೂ ಬೆಳೆದುಬಿಟ್ಟಿದೆ. ಇದಕ್ಕೆ ಸಂಪೂರ್ಣ ವಿರುದ್ದವಾಗಿ ಇದ್ದದ್ದು ನಮ್ಮ ನಾಡಿನ ಜನಪದ ವೈದ್ಯ ಪದ್ಧತಿ. ಇಲ್ಲಿ ಹಣದ ಆಸೆಗೆ ತಮ್ಮ ತಿಳುವಳಿಕೆಯನ್ನು ಮಾರಿಕೊಳ್ಳಬಾರದು ಎಂಬ ವಿವೇಕ ಇತ್ತು. ಇಂದಿನ ಆಧುನಿಕ ವೈದ್ಯಕೀಯ ಪದ್ಧತಿಯಲ್ಲಿ ತಿಳುವಳಿಕೆಯನ್ನು ಆಕರ್ಷಕವಾಗಿ ಮಾರಿಕೊಳ್ಳುವುದೇ ವಿವೇಕ.

ಇಂತಹದ್ದರಿಂದ ದೂರವಿದ್ದು ಜನರ ಸೇವೆ ಮಾಡಿದವರು ಶ್ರೀ ಜೆ. ಯಲ್ಲಪ್ಪ ದರೋಜಿಯವರು. ಇವರು ಹುಬ್ಬಳ್ಳಿಯಲ್ಲಿ ನೆಲೆಸಿದ್ದಾರೆ. ಜೆ. ಕೇರಪ್ಪ ಮತ್ತು ಜೆ. ಗಂಗಮ್ಮ ದಂಪತಿಗಳ ಮಗನಾಗಿ ಜುಲೈ I, 1929ರಲ್ಲಿ ಜನಿಸಿದರು. ಆದಿವಾಸಿ ಅಲೆಮಾರಿ ನಾಥಪಂಥದ ಸಮುದಾಯಕ್ಕೆ ಸೇರಿದವರು. ಇವರ ಪತ್ನಿ ಹುಲಿಗೆಮ್ಮ ದರೋಜಿ. ಎಸ್ ಎಸ್ ಎಲ್ ಸಿ ಶಿಕ್ಷಣವನ್ನು ಪಡೆದಿದ್ದಾರೆ. ಕಿರಿಯ ಹೆಲ್ತ್ ಇನ್ಸ್ ಪೆಕ್ಟರ್ ಆಗಿ ಕಾರ್ಯನಿರ್ವಹಿಸಿ ನಿವೃತ್ತರಾಗಿದ್ದಾರೆ. ಸದ್ಯ 88 ವರ್ಷಗಳನ್ನು ಪೂರ್ಣಗೊಳಿಸಿರುವ ಅವರು ಜನಪದ ಗೀತೆಗಳ ಹಾಡಿಕೆಯಲ್ಲಿಯೂ ಸಿದ್ಧಹಸ್ತರು. ಗೀಗಿ ಪದಗಳ ಹಾಡಿಕೆಯಲ್ಲಿ ಪ್ರಸಿದ್ದರು. ಜನಪದ ಹಾಡುಗಳು, ಕಥೆಗಳ ಕೃತಿಗಳನ್ನು ಪ್ರಕಟಿಸಿದ್ದಾರೆ. ಆರು ನೂರಕ್ಕು ಹೆಚ್ಚು ತ್ರಿಪದಿಗಳನ್ನು ಸಂಗ್ರಹಿಸಿ ಪ್ರಕಟಿಸಿದ್ದಾರೆ.

ಹಾಗೆಯೇ ಜನಪದ ಗಾದೆ ಒಗಟುಗಳನ್ನು ಸಂಗ್ರಹಿಸಿದ್ದಾರೆ. 'ವಡ್ಡುಪಾಳ್ಯ' ಎಂಬ ಕೃತಿಯನ್ನು ಜನಪದ ವೈದ್ಯ ಕುರಿತು ರಚಿಸಿದ್ದಾರೆ. ಅನೇಕ ಪಿಎಚ್. ಡಿ. ವಿದ್ಯಾರ್ಥಿಗಳಿಗೆ ತಿಳುವಳಿಕೆಯನ್ನು ನೀಡಿದ್ದಾರೆ. ಇವರಿಗೆ ವಿವಿಧ 18 ಪ್ರಶಸ್ತಿಗಳು ದೊರೆತಿವೆ. ಅಲೆಮಾರಿ ಆದಿವಾಸಿ ಸಂಪ್ರದಾಯದಂತೆಯೇ ಇಂದಿಗೂ ಸಮುದಾಯದಲ್ಲಿ ಕಂಡುಬರುವ ಜಗಳಗಳನ್ನು ಬಗೆಹರಿಸಿಕೊಳ್ಳಲಾಗುತ್ತದೆ. ನಾಥಪಂಥದಂತೆಯೇ ವೇಶಭೂಷಣ ಧರಿಸುವುದು ಇದೆ. ಅಂದರೆ ಜನಸಮುದಾಯದ ರೀತಿ ನೀತಿಗಳನ್ನು ಆಚರಿಸಿಕೊಂಡು ಬರುತ್ತಿದ್ದಾರೆ. ಸಮುದಾಯದ ಆಚರಣೆಗಳ ಜೊತೆಗೆ ಜನಪದ ವೈದ್ಯವನ್ನು ಆಚರಣೆಮಾಡಿಕೊಂಡು ಜನರಸೇವೆಯನ್ನು ಮಾಡುತ್ತಿದ್ದಾರೆ. ಇಂತಹ ಮಹನೀಯರಿಗೆ ಪ್ರಸಕ್ತ ಸಾಲಿನ ಅಕಾಡೆಮಿ ವಾರ್ಷಿಕ ಪ್ರಶಸ್ತಿ ನೀಡಿ ಗೌರವಿಸಲು ಸಂತಸವೆನ್ನಿಸುತ್ತದೆ.

ಶ್ರೀ ಇಮಾಮ್ ಹುಸೇನ್ ಮಸೂತಿಮನಿ

(ಗದಗ ಜಿಲ್ಲೆ)

ತತ್ವಪದ ಗಾಯನ

ಶ್ರೀ ಇಮಾಮ್ ಹುಸೇನ್ ಮಸೂತಿಮನಿಯವರು ಗದಗ ಜಿಲ್ಲೆಯ ನರಗುಂದ ತಾಲ್ಲೂಕಿನ ಕೊಣ್ಣೂರಿನವರು. ವಯಸ್ಸು 63ವರುಶಗಳು. ತತ್ವಪದ ಗಾಯಕರಾಗಿ ಪ್ರಸಿದ್ಧರಾಗಿದ್ದಾರೆ. ಇವರ ಕಲಾ ಸೇವೆಯನ್ನು ಕಂಡು ಕನ್ನಡ ಸಾಹಿತ್ಯ ಪರಿಷತ್ತು ನರಗುಂದ ತಾಲ್ಲೂಕು ಸಾಹಿತ್ಯ ಸಮ್ಮೇಳನದಲ್ಲಿ ಗೌರವಿಸಿದೆ. ಕರ್ನಾಟಕ ಜಾನಪದ ಅಕಾಡೆಮಿ ಕಾರ್ಯಕ್ರಮಗಳು ಅಲ್ಲದೆ, ಜಾನಪದ ಸಂಭ್ರಮ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಾರೆ. ರಾಜ್ಯಮಟ್ಟದಲ್ಲಿ ನಡೆದ ಅನೇಕ ಭಜನಾ ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನ ಪಡೆದಿದ್ದಾರೆ. ಇಂತಹ ಮಹನೀಯರಿಗೆ ಅಕಾಡೆಮಿ ವಾರ್ಷಿಕ ಪ್ರಶಸ್ತಿ ನೀಡಿ ಗೌರವಿಸಲು ಸಂತೋಷಪಡುತ್ತದೆ.

ಶ್ರೀ ವೈ. ಡಿ. ಮಧೂರಕರ

(ಹಾವೇರಿ ಜಿಲ್ಲೆ)

ಭಜನೆ

ನಮ್ಮ ನಾಡು ಹಲವು ಧಾರ್ಮಿಕ ಪಂಥಗಳ ನೆಲೆಯೂರು. ಇಲ್ಲಿ ಎಲ್ಲ ಧರ್ಮಗಳು ಪಂಥಗಳು ಬದುಕಿ ಬಾಳಿವೆ. ಅಂದರೆ ಇಲ್ಲಿನ ಜನರು ಎಲ್ಲ ಧರ್ಮ ಪಂಥಗಳ ಒಳಗು ಹಾದು ಬಂದಿದ್ದಾರೆ. ಅವುಗಳನ್ನು ಅನುಸರಿಸಿ ತಮ್ಮ ಜೀವನವನ್ನು ನಡೆಸಿದ್ದಾರೆ. ಇಂತಹ ಧಾರ್ಮಿಕ ಪಂಥಗಳಲ್ಲಿ ಒಂದಾದ ನಾಥಪಂಥವು ಶತಮಾನಗಳ ಕಾಲ ಇಲ್ಲಿ ನೆಲೆಕಂಡುಕೊಂಡಿದ್ದು ಅದು ಜನಸಮುದಾಯವನ್ನು ಪ್ರಭಾವಿಸಿದೆ. ಇಂತಹ ಪಂಥದ ಅನುಯಾಯಿಯಾಗಿರುವವರು ಶ್ರೀ ವೈ.ಡಿ. ಮಧೂರಕರ ಅವರು. ಇವರು ಹಾವೇರಿ ಜಿಲ್ಲೆಯ ಹಿರೇಕೆರೂರು ಪಟ್ಟಣದವರು. ಇವರಿಗೆ ಈಗ 86 ವರುಶಗಳು ತುಂಬಿವೆ. ಏಳನೆಯ ತರಗತಿಯವರೆಗೆ ಶಿಕ್ಷಣವನ್ನು ಪಡೆದವರು. ಬಹುಭಾಷಿಕ ತಿಳುವಳಿಕೆಯನ್ನು ಹೊಂದಿರುವವರು. ನಾಥಪಂಥದ ಸಂಪ್ರದಾಯದ ಭಜನೆಯಲ್ಲಿ ಪ್ರಸಿದ್ಧರು.

ಇವರು ಆದಿವಾಸಿ ಅಲೆಮಾರಿ ಬುಡಕಟ್ಟು ನಾಥಪಂಥದ ಸಂಪ್ರದಾಯದವರು. ಇವರ ಪೂರ್ವಿಕರೂ ಕೂಡ ನಾಥಪರಂಪರೆಯವರೇ. ನಿಸರ್ಗದ ಆರಾಧಕರಾದ ಇವರು ಭಜನೆಯಲ್ಲಿ ಇಂದಿಗೂ ನಂಬಿಕೆಯನ್ನಿಟ್ಟು ಅದನ್ನು ಮುಂದುವರೆಸಿದ್ದಾರೆ. ರಾಜ್ಯ ಹಾಗೂ ನೆರೆಯ ರಾಜ್ಯವಾದ ಮಹಾರಾಷ್ಟ್ರದ ಪಂಡರಾಪೂರದಲ್ಲಿಯೂ ಭಜನೆ ಮಾಡಿದ್ದಾರೆ. ಅಂದರೆ ವಿವಿಧ ವೇದಿಕೆಯಲ್ಲಿ ತಮ್ಮ ಸಂಪ್ರದಾಯದ ಭಜನೆಯನ್ನು ಮಾಡಿದ್ದಾರೆ.

ಇದಲ್ಲದೆ ಹಲವು ಸಂಘಸಂಸ್ಥೆಗಳ ಸದಸ್ಯರು ಅಧ್ಯಕ್ಷರೂ ಆಗಿ ಕಾರ್ಯನಿರ್ವಹಿಸಿದ್ದಾರೆ. ಹುಬ್ಬಳ್ಳಿಯ ಶ್ರೀ ಸಿದ್ಧಾರೂಢ ಮಠದ ಟ್ರಸ್ಟಿಯಾಗಿದ್ದಾರೆ. ಹುಬ್ಬಳ್ಳಿ–ಧಾರಾವಾಡಗಳ ಜನಪದ ದಸರಾ ಮಹೋತ್ಸವ ಸಮಿತಿ ಅಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ. ಹೀಗೆ ಹತ್ತು ಹಲವು ಕಡೆ ಸಕ್ರಿಯರಾಗಿ ಕೆಲಸ ಮಾಡುತ್ತ ಸಮಾಜ ಸೇವೆಯಲ್ಲಿಯೂ ನಿರತರಾಗಿದ್ದಾರೆ. ಹೆಚ್ಚು ಸಮಾಜಮುಖಿಯಾಗಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ.

ಇವರ ಸೇವೆಯನ್ನು ಗಮನಿಸಿದ ಜನರು ಸಂಘಸಂಸ್ಥೆಗಳು 'ಮತ್ಸೇಂದ್ರನಾಥ ಪ್ರಶಸ್ತಿ', ಮಹಾರಾಷ್ಟ್ರದಿಂದ 'ನಾಥಭೂಷಣ' ಪ್ರಶಸ್ತಿ, 'ಧರ್ಮಶ್ರೀ' ಪ್ರಶಸ್ತಿ, 'ಕುವೆಂಪು' ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗಿದೆ. ಇಂತಹ ಸಮಾಜಮುಖಿ ಹಿರಿಯ ಜೀವಕ್ಕೆ ಈ ವರ್ಷದ ಅಕಾಡೆಮಿಯ ವಾರ್ಷಿಕ ಪ್ರಶಸ್ತಿ ನೀಡಿ ಗೌರವಿಸಲು ಹರ್ಷವೆನ್ನಿಸುತ್ತದೆ.

ಶ್ರೀಮತಿ ಸೋಬಿನ ಮೋತೆಸ್ ಕಾಮ್ರೇಕರ್

(ಉತ್ತರ ಕನ್ನಡ ಜಿಲ್ಲೆ)

ಸಿದ್ದಿಗಳ ಡಮಾಮಿ ನೃತ್ಯ ಕಲಾವಿದೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ನೆಲೆಸಿರುವ ಸಿದ್ದಿ ಬುಡಕಟ್ಟು ಸಮುದಾಯವು ಸಾಂಸ್ಕೃತಿಕವಾಗಿ ವಿಶಿಷ್ಟವಾಗಿದೆ. ಶಾರೀರಿಕ ಚಹರೆಗಳಿಂದಲೇ ಇದು ಇಲ್ಲಿನ ಪರಿಸರಕ್ಕೆ ಹೊರತಾದ ಒಂದು ಸಮುದಾಯ ಎಂಬುದು ಗೋಚರಿಸುತ್ತದೆ. ದಕ್ಷಿಣಾ ಆಫ್ರಿಕ ಮೂಲದ ಈ ಸಮುದಾಯವು ಪೋರ್ಚುಗೀಸರ ಕಾಲದಲ್ಲಿ ನೆರೆಯ ಗೋವಾ ರಾಜ್ಯಕ್ಕೆ ಬಂದು ಸೇರಿದರು. ಅಲ್ಲಿಂದ ಕಾರವಾರ ಪ್ರದೇಶಕ್ಕೆ ಸೇರಿದ ಇವರು ಸ್ಥಳೀಯ ಜನರೊಂದಿಗೆ ಬೆರೆತರು. ನಂತರ ಇಡೀ ಸಮುದಾಯ ಸ್ಥಳಿಯ ಬದುಕಿಗೆ ಹೊಂದಿಕೊಂಡು ಇಲ್ಲಿಯೇ ಬೇರುಬಿಟ್ಟಿದೆ. ಇದು ಕರ್ನಾಟಕದ ಸಂಸ್ಕೃತಿಯ ಬಹುತ್ವವನ್ನು ಹೆಚ್ಚಿಸಿದೆ.

ಇಂತಹದ್ದರಲ್ಲಿ ಸಿದ್ದಿಗಳ ಡಮಾಮಿ ನೃತ್ಯವೂ ಒಂದು. ಇದು ಈಚೆಗೆ ಮುಂಚೂಣಿಗೆ ಬರುತ್ತಿದೆ. ಮುಂದೆ ತರುವ ಹಲವರಲ್ಲಿ ಉತ್ತರ ಕನ್ನಡ ಜಿಲ್ಲೆ ಹಳಿಯಾಳ ತಾಲ್ಲೂಕಿನ ಗಾಡಗೇರ ಗ್ರಾಮದವರಾದ ಶ್ರೀಮತಿ ಸೋಬಿನಾ ಮೋತೆಸ್ ಕಾಮ್ರೇಕರ ಮುಖ್ಯರು. ಸಿದ್ದಿಗಳ ಮುಖ್ಯ ನೃತ್ಯವಾದ ಡಮಾಮಿ ನೃತ್ಯ ಮತ್ತು ವಾದ್ಯದಲ್ಲಿ ನಿಪುಣರಾಗಿದ್ದಾರೆ. ಸಮುದಾಯದಲ್ಲಿ ಕಲೆಯನ್ನು ಮರುರೂಪಿಸುವಲ್ಲಿ ಶ್ರಮಿಸುತ್ತಿದ್ದಾರೆ. ಅನೇಕ ತರಬೇತಿ ಶಿಬಿರಗಳಲ್ಲಿ ಡಮಾಮಿ ನೃತ್ಯ ಮತ್ತು ಚರ್ಮವಾದ್ಯ ತರಬೇತಿ ನೀಡಿದ್ದಾರೆ.

ಅಲ್ಲದೆ 'ಅಮ್ಬೋ ಮುಳ, ಎಂಬ ಸಿದ್ದಿಗಳ ಸಾಂಸ್ಕೃತಿಕ ತಂಡವನ್ನು ಕಟ್ಟಿ ರಾಜ್ಯ ಮತ್ತು ಹೊರರಾಜ್ಯಗಳಲ್ಲಿ ದೆಹಲಿ, ಮಹಾರಾಷ್ಟ್ರ, ಕೇರಳ, ತಮಿಳುನಾಡು ಮುಂತಾದ ರಾಜ್ಯಗಳಲ್ಲಿಯೂ ಕಾರ್ಯಕ್ರಮ ನೀಡಿದ್ದಾರೆ. ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಸನ್ ಸೊಸೈಟಿ ಹಾಗೂ ಆರೋಗ್ಯ ಇಲಾಖೆಗಳು ಆಯೋಜಿಸಿದ್ದ ಅನೇಕ ಜಾಗೃತಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಕಾರ್ಯಕ್ರಮ ನೀಡಿದ್ದಾರೆ. ಹೀಗೆ ತಮ್ಮನ್ನು ತಾವು ತೊಡಗಿಸಿಕೊಂಡು ಸಿದ್ದಿಗಳ ಬುಡಕಟ್ಟು ಕಲೆಯಾದ ಡಮಾಮಿ ನೃತ್ಯವನ್ನು ಬೆಳೆಸುತ್ತ ತಾವು ಬೆಳೆಯುತ್ತ ಕನ್ನಡ ನಾಡಿನ ಬಹುಮುಖಿ ಸಂಸ್ಕೃತಿಯನ್ನು ಸಮೃದ್ಧವಾಗಿ ಬೆಳೆಸಿದ್ದಾರೆ. ಡಮಾಮಿ ನೃತ್ಯದಲ್ಲಿನ ಇವರ ಸಾಧನೆಯನ್ನು ಮೆಚ್ಚಿ ಅನೇಕ ಸಂಘಸಂಸ್ಥೆಗಳು ಇವರನ್ನು ಸನ್ಮಾನಿಸಿವೆ. ಇಂತಹವರಿಗೆ ಅಕಾಡೆಮಿಯ ವಾರ್ಷಿಕ ಪ್ರಶಸ್ತಿ ನೀಡಿ ಗೌರವಿಸಲು ಸಂತಸವೆನ್ನಿಸುತ್ತದೆ.

ಶ್ರೀ ಎಚ್.ಕೆ. ಕಾರಮಂಚಪ್ಪ

(ಬಳ್ಳಾರಿ ಜಿಲ್ಲೆ)

ಡೊಳ್ಳುಕುಣಿತ

ಡೊಳ್ಳುಕುಣಿತ ಕರ್ನಾಟಕದ ಮುಖ್ಯಪ್ರದರ್ಶನ ಕಲೆಗಳಲ್ಲಿ ಒಂದು. ಇದು ಹಾಲುಮತ ಸಮುದಾಯದ ಜೊತೆಗೆ ನಿಕಟ ಸಂಬಂಧವನ್ನು ಹೊಂದಿದ್ದರೂ ಈಗ ಅದು ಈ ಗಡಿಯನ್ನು ದಾಟಿ ಎಲ್ಲರನ್ನು ಆಕರ್ಷಿಸುತ್ತಿದೆ. ಸಂಪ್ರದಾಯದ ಎಲ್ಲೆಗಳನ್ನು ಮೀರಿ ಇಂದು ಹೆಚ್ಚು ಆಕರ್ಷಕವಾದ ಕಲೆಯಾಗಿ ಬೆಳೆದಿದೆ. ಅದು ಪಡೆದಿರುವ ಈ ಹೊಸ ವಿಸ್ತರಣೆ ಆ ಕಲೆಗೆ ನವೀನತೆಯನ್ನು ತಂದುಕೊಟ್ಟಿದೆ; ಮರುಜೀವ ನೀಡಿದೆ.

ಹೀಗೆ ಈ ಕಲೆಗೆ ಮರುಜೀವ ನೀಡಿದವರಲ್ಲಿ ಶ್ರೀ ಎಚ್. ಕೆ. ಕಾರಮಂಚಪ್ಪ ಒಬ್ಬರು. ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನ ಮಲಪನಗುಡಿಯವರು. ತಂದೆಯ ಹೆಸರು ನವಣೆಪ್ಪ. ಏಪ್ರಿಲ್ 10, 1951ರಲ್ಲಿ ಜನಿಸಿದವರು. ವಂಶಪಾರಂಪರಿಕವಾಗಿ ಬಂದ ಈ ಕಲೆಯನ್ನು ತಮ್ಮ 12ನೆಯ ವಯಸ್ಸಿನಿಂದ ಕಲಿತು ಅದನ್ನು ಅಭಿವ್ಯಕ್ತಿಸುತ್ತಿದ್ದಾರೆ. ಕಳೆದ 50ವರುಶಗಳಿಂದ ಡೊಳ್ಳು ಕುಣಿಯುತ್ತಿದ್ದಾರೆ. ಎರಡನೆಯ ತರಗತಿವರೆಗೆ ಓದಿ ನಂತರ ಅದರಿಂದ ದೂರವಾದವರು. ಡೊಳ್ಳುಕುಣಿತವನ್ನು ಕಲಿತು ಅದರಲ್ಲಿಯೇ ಮುಂದುವರೆದು ಪರಿಣತಿಯನ್ನು ಪಡೆದವರು. ಅಲ್ಲದೆ 'ಪ್ರಕಾಶ ಡೊಳ್ಳುಕುಣಿತ ತಂಡ' ಕಟ್ಟಿ ಅದರ ಅಧ್ಯಕ್ಷರಾಗಿ ದುಡಿಯುತ್ತಿದ್ದಾರೆ.

ನಾಡಿನ ಮಹತ್ವದ ಸಮಾರಂಭಗಳಲ್ಲಿ ಪ್ರದರ್ಶನ ನೀಡಿದ್ದಾರೆ. ಸಾಹಿತ್ಯ ಸಮ್ಮೇಳನ, ದಸರ, ಹಂಪಿ ಉತ್ಸವ, ರಾಷ್ಟ್ರೀಯ ಕ್ರೀಡಾಕೂಟ, ಪ್ರತಿಭೋತ್ಸವ, ಜಾನಪದ ಕಲಾಮೇಳ, ಆನೆಗುಂದಿ ಉತ್ಸವ, ಹಬ್ಬ, ಜಾತ್ರೆ ಹೀಗೆ ಅನೇಕ ಸಮಾರಂಭಗಳಲ್ಲಿ ಡೊಳ್ಳು ಕುಣಿತ ನಡೆಸಿಕೊಟ್ಟಿದ್ದಾರೆ. ಇದು ಅವರ ಕಲಾವಂತಿಕೆಯನ್ನು ಎತ್ತಿತೋರಿಸುತ್ತದೆ. ಇದನ್ನು ಕಂಡ ಅನೇಕರು ಅವರನ್ನು ಸನ್ಮಾನಿಸಿದ್ದಾರೆ. ಇಂತಹ ಹೆಸರಾಂತ ಕಲಾವಿದರಿಗೆ ಅಕಾಡೆಮಿಯ ಬಹುಮಾನವನ್ನು ನೀಡಿ ಗೌರವಿಸಲು ಸಂಭ್ರಮಿಸುತ್ತದೆ.

ಶ್ರೀಮತಿ ರತ್ನಮ್ಮ ರುದ್ರಪ್ಪ ಕ್ರಾಂತಿ
(ಬೀದರ್ ಜಿಲ್ಲೆ)
ಜೋಗುಳದ ಪದ

ಬೀದರ್ ಜಿಲ್ಲೆ ಬಹುಭಾಷಿಕ ಮತ್ತು ಬಹುಸಾಂಸ್ಕೃತಿಕ ಪರಿಸರ. ಇಲ್ಲಿನ ಜನಪದ ಸಾಹಿತ್ಯ ಸಂಸ್ಕೃತಿಯೂ ಬಹುತ್ವದ ನಡುವೆಯೇ ಇದೆ. ಇಂತಹ ಪರಿಸರದಲ್ಲಿ ಜನಪದ ಸಂಸ್ಕೃತಿಯ ತೇರನ್ನು ಮುನ್ನಡೆಸುತ್ತಿರುವವರು ಶ್ರೀಮತಿ ರತ್ನಮ್ಮ ರುದ್ರಪ್ಪ ಕ್ರಾಂತಿ. ಇವರು ಬೀದರ್ ಜಿಲ್ಲೆಯ ಹುಮನಾಬಾದ್ ತಾಲೂಕಿನ ಕಠಳ್ಳಿ ಗ್ರಾಮದವರು. ಇವರೀಗ 67 ವರ್ಷಗಳು. ದಲಿತ ಸಮುದಾಯಕ್ಕೆ ಸೇರಿದ ಇವರು ಅನಕ್ಷರಸ್ಥರು. ಸ್ಥಳೀಯವಾಗಿ ನಡೆಯುವ ಅನೇಕ ಕಾರ್ಯಕ್ರಮಗಳಲ್ಲಿ ಸೋಬಾನೆ ಹಾಡು, ಜೋಗುಳ ಪದಗಳು. ಇತ್ಯಾದಿಗಳನ್ನು ಹಾಡುತ್ತಾರೆ. ಇದನ್ನು ಕಳೆದ ಮೂವತ್ತು ವರುಶಗಳಿಂದ ಮಾಡಿಕೊಂಡು ಬರುತ್ತಿದ್ದಾರೆ. ಇವರ ಜನಪದ ಸಂಸ್ಕೃತಿಯ ಸೇವೆಗೆ ಅನೇಕ ಸಂಘಸಂಸ್ಥೆಗಳು ಗೌರವಿಸಿವೆ. ಸದ್ಯ ಇವರ ಕಲಾಸೇವೆಗೆ ಇನ್ನಷ್ಟು ಇಂಬು ನೀಡಲು ಈ ಬಾರಿಯ ಅಕಾಡೆಮಿಯ ಬಹುಮಾನವನ್ನು ನೀಡಿ ಗೌರವಿಸಲು ಸಂತೋಷವೆನ್ನಿಸುತ್ತದೆ.

ಶ್ರೀ ಅಮೃತೇಶ ಮಾಸ್ಟರ ಕಲಶೆಟ್ಟಿ
(ಕಲಬುರಗಿ ಜಿಲ್ಲೆ)
ತತ್ವಪದ ಗಾಯನ

ಶ್ರೀ ಅಮೃತೇಶ ಕಲಶೆಟ್ಟಿಯವರು ಕಲಬುರಗಿ ನಗರದವರು. ಫೆಬ್ರವರಿ 27, 1934ರಲ್ಲಿ ಜನಿಸಿದವರು. ಇವರ ತಂದೆ ರೇವಪ್ಪ ಕಲಶೆಟ್ಟಿ. ಇವರಿಗೀಗ 82 ವರುಶಗಳಾಗಿವೆ. ಪುರಾಣ, ಪ್ರವಚನ, ಹಾಸ್ಯ, ಕೀರ್ತನೆಗಳ ಹಾಡಿಕೆ, ಕೊಳಲು ಹಾರ್ಮೋನಿಯಂ, ತಬಲಾಗಳನ್ನು ಬಾರಿಸುತ್ತಾರೆ. ತತ್ವಪದಗಳು ಮತ್ತು ಜನಪದ ಗೀತೆಗಳ ಗಾಯನದಲ್ಲಿ ಪ್ರಸಿದ್ದರು. ಇವುಗಳ ಜೊತೆಗೆ ಭಕ್ತಿಗೀತೆಗಳು, ಸುಗಮ ಸಂಗೀತ, ವಚನಗಾಯನ, ದಾಸರಪದಗಳು; ಹೀಗೆ ಹಲವು ಬಗೆಯ ಹಾಡುಗಳನ್ನು ಹಾಡುತ್ತಾರೆ. ಸುಮಾರು 50 ವರುಶಗಳಿಂದಲೂ ಇದನ್ನು ಮಾಡಿಕೊಂಡು ಬರುತ್ತಿದ್ದಾರೆ. ಆಕಾಶವಾಣಿ ಮತ್ತು ದೂರದರ್ಶನದ ಕಲಾವಿದರಾಗಿಯೂ ಪ್ರಸಿದ್ದರು. ಜಿಲ್ಲಾಡಳಿತ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಮ್ಮಿಕೊಂಡಿದ್ದ ಅನೇಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ತನ್ನ ಕಲೆಯನ್ನು ಪ್ರದರ್ಶಿಸಿದ್ದಾರೆ. ಜನರ ಜೊತೆಗೆ ಇದ್ದು ಜನಸಂಸ್ಕೃತಿಯ ಬೇರುಗಳನ್ನು ಗಟ್ಟಿಗೊಳಿಸುವಲ್ಲಿ ಸಾಕಷ್ಟು ದುಡಿದಿದ್ದಾರೆ. ಜನಪದ ಸಾಹಿತ್ಯ ಜನರಿಗೆ ತಲುಪಬೇಕೆಂಬ ಆಸೆಯಿಂದ 'ಜನಪ್ರಿಯ ಜಾನಪದ ಗೀತೆಗಳು' ಎಂಬ ಕೃತಿಯನ್ನು ಹೊರತಂದಿದ್ದಾರೆ. ಇವರಿಗೆ ಅಕಾಡೆಮಿಯ ವಾರ್ಷಿಕ ಪ್ಶಸ್ತಿ ನೀಡಿ ಗೌರವಿಸಲು ಸಂಷವೆನ್ನಿಸುತ್ತದೆ.

ಶಾವಮ್ಮ
(ಕೊಪ್ಪಳ ಜಿಲ್ಲೆ)
ಲಂಬಾಣಿ ನೃತ್ಯ

ಲಂಬಾಣಿ ಸಮುದಾಯ ಇಂದಿಗೂ ತನ್ನ ವಿಶಿಷ್ಟತೆಯನ್ನು ಉಳಿಸಿಕೊಂಡಿರುವ ಒಂದು ಸಮುದಾಯ. ತನ್ನ ಬುಡುಕಟ್ಟು ಚಹರೆಗಳನ್ನು ಹಲವು ರೂಪಗಳಲ್ಲಿ ಉಳಿಸಿಕೊಂಡು ಬಂದಿದೆ. ಉತ್ತರ ಭಾರತದಿಂದ ದಕ್ಷಿಣಕ್ಕೆ ಇದು ವಲಸೆ ಬಂದಿರುವ ಈ ಸಮುದಾಯ ಸ್ಥಳೀಯರಲ್ಲಿ ಸ್ಥಳೀಯವಾಗಿ ನೆಲೆಸಿದೆ. ಕನ್ನಡ ಸಂಸ್ಕೃತಿಯ ಜೊತೆಗೆ ಅನುಸಂಧಾನ ನಡೆಸುತ್ತ ತನ್ನ ಲಂಬಾಣಿ ಭಾಷೆ, ವೇಷಭೂಷಣ, ಹಾಡು ನೃತ್ಯಗಳನ್ನು ಉಳಿಸಿಕೊಂಡು ಬಂದಿದೆ. ಇದು ಇಂದಿಗೂ ವಿಶಿಷ್ಟವಾಗಿದ್ದು ಎದ್ದು ಅದರ ಸಾಂಸ್ಕೃತಿಕ ಚಹರೆ. ರಾಜ್ಯದ ಹಲವು ಭಾಗಗಳಲ್ಲಿ ಹರಡಿಕೊಂಡಿರುವ ಈ ಸಮುದಾಯವು ತನ್ನತನದ ಚಹರೆಗಳನ್ನು ಉಳಿಸಿಕೊಂಡು ಸಾಗುತ್ತಿದೆ.

ಒಂದು ಜನಸಮುದಾಯ ಹೀಗೆ ಸಾಗುವಲ್ಲಿ ಅದರ ಅಸಂಖ್ಯ ಜನರ ಪಾತ್ರವಿರುತ್ತದೆ. ಅಂತಹವರಲ್ಲಿ ಶ್ರೀಮತಿ ಶಾವಮ್ಮ ಕೂಡ ಒಬ್ಬರು. ಅವರು ಕೊಪ್ಪಳ ಜಿಲ್ಲೆಯ ಯಲಬುರ್ಗ ತಾಲ್ಲೂಕಿನ ಗೋರ್ಲೆಕೊಪ್ಪದವರು. ಇವರ ಗಂಡ ಲಕ್ಷ್ಮಪ್ಪ ರಾಠೋಡ್. ಇವರಿಗೆ ಸದ್ಯ 70 ವರುಶಗಳಾಗಿವೆ. ಮೂಲತಹ ಗದಗ ಜಿಲ್ಲೆಯ ಗಜೇಂದ್ರಗಡದವರಾದ ಇವರು ರಾಮಪ್ಪ ಮತ್ತು ಹೊನ್ನಮ್ಮ ದಂಪತಿಗಳ ಮಗಳಾಗಿ ಹುಟ್ಟಿದವರು. ತಂದೆ ತಾಯಿಗೆ ಬಡತನವಿದ್ದ ಕಾರಣ ಅವರು ಕೂಲಿಕೆಲಸ ಮಾಡಿದವರು. ಆದರೂ ಅವರಿಗೆ ತಮ್ಮ ಸಮುದಾಯದ ಕಲೆಯಲ್ಲಿ ವಿಶೇಷ ಆಸಕ್ತಿಗಳಿದ್ದವು. ಇವರಿಂದಲೇ ಶಾವಮ್ಮನವರು ಲಂಬಾಣಿ ಹಾಡುಗಳನ್ನು ನೃತ್ಯವನ್ನು ಕಲಿತುಕೊಂಡರು. ನಂತರ ಮದುವೆಯಾದ ಮೇಲೆ ತಮ್ಮ ಗಂಡನ ಮನೆಯಲ್ಲಿ ಕೂಲಿಕೆಲಸ ಮಾಡುತ್ತ ಅಲ್ಲಿಯೂ ತಮ್ಮ ಹಾಡಿಕೆ ಮತ್ತು ನೃತ್ಯವನ್ನು ಮುಂದುವರೆಸಿದರು.

ತಮ್ಮ ಊರಿನ, ಸಮುದಾಯದ ಹಲವು ಕಾರ್ಯಕ್ರಮಗಳಲ್ಲಿ ನೃತ್ಯ ಮಾಡಿದರು. ಅಲ್ಲದೆ ಇಟಗಿ ಉತ್ಸವ, ಆನೆಗೊಂದಿ ಉತ್ಸವ ಮುಂತಾದ ಅನೇಕ ಕಡೆಗಳಲ್ಲಿ ನೃತ್ಯ ಪ್ರದರ್ಶನದ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಮಳೆಯಾಗದೆ ಇದ್ದಾಗ ಲಂಬಾಣಿ ಮಹಿಳೆಯರು ನೃತ್ಯ ಮಾಡಿದರೆ ಮಳೆಬರುತ್ತದೆ ಎಂಬ ನಂಬಿಕೆಯಿದೆ. ಅಂತಹ ಸಂದರ್ಭದಲ್ಲಿಯೂ ನೃತ್ಯಮಾಡಿದ್ದಾರೆ. ಇಂತಹ ಜನಪದ ನೃತ್ಯ ಕಲಾವಿದೆಗೆ ಈ ಬಾರಿಯ ಅಕಾಡೆಮಿಯ ಪ್ರಶಸ್ತಿಯನ್ನು ನೀಡಿ ಗೌರವಿಸಲು ಸಂಭ್ರಮವೆನ್ನಿಸುತ್ತದೆ.

ಬಸಪ್ಪ ಹೆಗ್ಗಡದಿನ್ನಿ
(ರಾಯಚೂರು ಜಿಲ್ಲೆ)
ಜನಪದ ಗಾಯನ

ಕೆಲವು ಜನರೇ ಹೀಗೆ. ತಮ್ಮ ಬಹುಮುಖಿ ಪ್ರತಿಭೆಯಿಂದ ಜನರನ್ನು ಅಚ್ಚರಿಗೊಳಿಸುತ್ತಾರೆ. ಅಂತಹ ಅಚ್ಚರಿಸಿ ಮೂಡಿಸುವ ಕಲಾವಿದರಲ್ಲಿ ಶ್ರೀ ಬಸಪ್ಪ ಹೆಗ್ಗಡದಿನ್ನಿಯವರು ಒಬ್ಬರು. ಇವರು ರಾಜ್ಯದ ಅತ್ಯಂತ ಹಿಂದುಳಿದ ತಾಲೂಕಾದ ದೇವದುರ್ಗದವರು. ಎಸ್‌ಎಸ್‌ಎಲ್‌ಸಿ ವರೆಗಿನ ವಿದ್ಯಾಭ್ಯಾಸ ಮಾಡಿದ್ದಾರೆ. ನಂತರ ರಾಯಚೂರಿನ ಶಕ್ತಿ ನಗರದಲ್ಲಿ 25 ವರುಶಗಳ ಕಾಲ ಕೆಲಸ ಮಾಡಿ ಈಗ ಸ್ವಯಂ ನಿವೃತ್ತಿಯನ್ನು ಪಡೆದಿದ್ದಾರೆ.

ತಮ್ಮ ತಂದೆ ಮತ್ತು ಅಣ್ಣನಿಂದ ಬಾಲ್ಯದಿಂದಲೇ ಹಾಡಲು ಕಲಿತವರು. ಹಾಡುವುದನ್ನು ಕಲಿತರು. ಇವರ ತಂದೆ ಬಯಲಾಟವನ್ನು ಕಲಿಸುತ್ತಿದ್ದವರು. ಅವರ ಜೊತೆಗಿದ್ದು ಹಾಡುವುದನ್ನು ಕಲಿತುಕೊಂಡರು. ತಾವೇ ಹಲವು ವಾದ್ಯಗಳನ್ನು ನುಡಿಸುವುದನ್ನು ತಯಾರಿಸುವುದನ್ನು ಕಲಿದಿದ್ದಾರೆ. ಇದು ಅವರಿಗೆ ಜನಪದ ಕಲೆಗಳಲ್ಲಿ ಇರುವ ಬಹುಮುಖಿ ಪ್ರತಿಭೆಯನ್ನು ತೋರಿಸಿಕೊಡುತ್ತದೆ. ಬಾಚಣಿಕೆಯನ್ನು ಒಂದು ಸಾಧನವಾಗಿ ಬಳಸಿ ಅದರಿಂದ ನಾದವನ್ನು ಹೊಮ್ಮಿಸುವುದು, ಹಾರ್ಮೋನಿಯಂ, ಪಿಟೀಲು, ಬುಲ್ ಬುಲ್ ತರಂಗ, ಚೌಡಿಕೆ, ಡೊಳ್ಳು, ಮೃದಂಗ, ಡೋಲಕ್, ತಬಲ, ದಮ್ಮಡಿ, ಕಣಿ ಹಲಗೆ, ಬ್ಯಾಂಡ್ ಹೀಗೆ ಹಲವು ಬಗೆಯ ಸಾಧನಗಳನ್ನು ಬಾರಿಸುತ್ತಾರೆ. ಒಂದೇ ವೇಳೆಯಲ್ಲಿ ಬೇರೆ ಬೇರೆ ಬಗೆಯ ಆರು ವಾದ್ಯಗಳನ್ನು ನುಡಿಸುತ್ತಾರೆ. ಕಾಲಲ್ಲಿ ತಾಳ, ಬಲಗೈಯಲ್ಲಿ ದಮ್ಮಡಿ, ಎಡಗೈಯಲ್ಲಿ ಏಕತಾರಿ, ಹಾಗೂ ಹಾರ್ಮೋನಿಯಂ ನುಡಿಸಬಲ್ಲ ಸಾಮರ್ಥ್ಯ ಇವರಿಗಿದೆ. ದಪ್ಪು, ಹಲಗೆ, ಡೊಳ್ಳು ಮುಂತಾದ ವಾದ್ಯಗಳನ್ನು ತಮ್ಮ ಬೆರಳುಗಳ ಮೂಲಕ ಮಾತನಾಡಿಸಬಲ್ಲ ಮಾಂತ್ರಿಕರು.

ಇವುಗಳ ಜೊತೆಗೆ ಗೊಂದಲೇರ ಪದ, ದಾಸರ ಪದ, ತತ್ವಪದ, ಕಲಿಯುಗದ ಪದ, ಮಳೆರಾಯನ ಪದ, ಬೀಸುವ ಪದ, ಕುಟ್ಟುವ ಪದ, ಮೊಹರಂ ಪದ ಇತ್ಯಾದಿಗಳನ್ನು ಹಾಡುತ್ತಾರೆ. ಪುಂಗಿ ನುಡಿಸುತ್ತಾರೆ. ಅಲ್ಲದೆ ಡಪ್ಪಿನಾಟ ಮತ್ತು ಬಯಲಾಟದ ಕಲಾವಿದರಾಗಿಯೂ ಹೆಸರಾಗಿದ್ದಾರೆ. ಹೀಗೆ ಹಲವು ಬಗೆಯಲ್ಲಿ ತಮ್ಮ ಪ್ರತಿಭೆಯನ್ನು ಅಭಿವ್ಯಕ್ತಿಸುವ ದಾರಿಗಳನ್ನು ಕಂಡುಕೊಂಡಿರುವ ಶ್ರೀಯುತರು ಜನಪದ ಕಲೆಗಳಿಗೆ ತಮ್ಮನ್ನು ಮುಡುಪಾಗಿಟ್ಟುಕೊಂಡಿರುವುದು ತಿಳಿಯುತ್ತದೆ. ಶ್ರೀ ಬಸಪ್ಪ ಹೆಗ್ಗಡದಿನ್ನಿ ಅವರಿಗೆ ಈ ಬಾರಿಯ ಅಕಾಡೆಮಿ ಬಹುಮಾನವನ್ನು ನೀಡಿ ಗೌರವಿಸಲು ಸಂತಸವೆನ್ನಿಸುತ್ತದೆ.

ಶ್ರೀಮತಿ ನಾಗಮ್ಮ

(ಯಾದಗಿರಿ ಜಿಲ್ಲೆ)

ಬುರ್ರಕಥೆ ಗಾಯಕಿ

ನಾಗರಿಕತೆ ಎಷ್ಟೊಂದು ಬೆಳೆದಿದ್ದರೂ ಇನ್ನು ಕೆಲವು ಜನಸಮುದಾಯಗಳು ಇದರಿಂದ ದೂರವೇ ಉಳಿದಿವೆ. ಆಧುನಿಕ ಜಗತ್ತು ಕೆಲವರಿಗೆ ಎಷ್ಟೊಂದು ಅವಕಾಶಗಳನ್ನು ಸೃಷ್ಟಿಕೊಟ್ಟಿದ್ದು ಮತ್ತೆ ಕೆಲವರಿಗೆ ಏನೊಂದನ್ನೂ ನೀಡದೆ ಅಲೆಮಾರಿಗಳಾಗಿಯೇ ಉಳಿಯುವಂತೆ ಮಾಡಿದೆ. ಅಂದರೆ ನಮ್ಮ ಸಮಾಜದಲ್ಲಿ ಅಸಮಾನತೆ ಎನ್ನುವುದು ಯಾವ ಪರಿ ಇದೆ ಎನ್ನುವುದನ್ನು ಇಂದು ಊಹಿಸಲಾಗದಷ್ಟು ಬೆಳೆದಿದೆ. ಕೆಲವರಿಗೆ ಹಲವು ಶತಮಾನಗಳು ತಿಂದರೂ ಸವೆಯದ ಸಂಪತ್ತಿದ್ದರೆ ಕೆಲವರಿಗೆ ಹೊತ್ತಿನ ಊಟಕ್ಕೂ ಪರದಾಡುವಂತಹ ಸ್ಥಿತಿ ಸ್ವಾತಂತ್ರ್ಯ ಬಂದ 70 ವರುಶಗಳ ನಂತರವೂ ಇದೆ. ವಿಶೇಷವಾಗಿ ಅಲೆಮಾರಿ ಸಮುದಾಯಗಳಿಗೆ ಹೊತ್ತು ಊಟಕ್ಕೆ ಮತ್ತು ಇರಲು ಒಂದು ಸೂರಿಲ್ಲದೆ ಊರೂರು ಅಲೆವ ಪರಿಸ್ಥಿತಿ. ಆದರೂ ಇಂತಹ ಸಮುದಾಯಗಳಲ್ಲಿ ಜನರ ಕಲೆಗೆ ಯಾವ ಕೊರತೆಯೂ ಇಲ್ಲ. ಅವರ ಸೃಜನಶೀಲತೆಗೆ ಅದಾವುದೂ ಕೊರತೆಯಾಗದಿರುವುದು ಅಚ್ಚರಿಯ ಸಂಗತಿ.

ಇವರು ಯಾದಗಿರಿ ಜಿಲ್ಲೆಯ ಸೈದಾಪೂರದಲ್ಲಿ ಸದ್ಯಕ್ಕೆ ನೆಲೆಸಿದ್ದಾರೆ. ಬುಡ್ಗಜಂಗಮ ಅಲೆಮಾರಿ ಸಮುದಾಯದ ಇವರು ಊರೂರು ಸುತ್ತುತ್ತ ಬುರ್ರಕಥೆ ಮಾಡುತ್ತ ಜೀವನ ನಡೆಸುತ್ತಿದ್ದಾರೆ. 1952ರಲ್ಲಿ ಜನಿಸಿದ ಇವರಿಗೆ ಈಗ ಇವರಿಗೆ 64 ವರ್ಷಗಳು. ತಮ್ಮ ಪೂರ್ವಿಕರಿಂದ ಕಲಿತ ಸೆಂಚುಲಮ್ಮ, ಬಾಲನಾಗಮ್ಮ, ಸೋಮರಾಜ ಕಥೆ, ರಾಮುಲಮ್ಮ, ಮಾಣಿಕೇಶ್ವರಿ, ರೇಣುಕಾಯಲ್ಲಮ್ಮ ಮುಂತಾದ ಕಥೆಗಳನ್ನು ಹಾಡುತ್ತಾ ನಮ್ಮ ನಾಡಿನ ಜನಪದ ಪರಂಪರೆಯನ್ನು ಜೀವಂತವಾಗಿ ಉಳಿಸಿಕೊಂಡು ಬಂದಿದ್ದಾರೆ. ಇಂತಹ ಅಪ್ರತಿಮ ಗಾಯಕಿಗೆ ಈ ಬಾರಿಯ ಅಕಾಡೆಮಿಯ ವಾರ್ಷಿಕ ಪ್ರಶಸ್ತಿ ನೀಡಿ ಗೌರವಿಸಲು ಸಂತಸವೆನ್ನಿಸುತ್ತದೆ.

ಶ್ರೀಮತಿ ಜಲ್ಲೆ ಜಡೆಮಾದಮ್ಮ

(ಚಾಮರಾಜನಗರ ಜಿಲ್ಲೆ)

ಪ್ರಸೂತಿ ಸೇವೆ

ಚಾಮರಾಜನಗರ ಜಿಲ್ಲೆಯ ಬಿಳಿಗಿರಿ ರಂಗನಬೆಟ್ಟದ ಎರಕನಗದ್ದೆಯ ಸೋಲಿಗರ ಮಹಿಳೆ ಶ್ರೀಮತಿ ಜಡೆಮಾದಮ್ಮ ಜನಸೇವೆಯ ನಿಜವಾದ ಪ್ರತಿನಿಧಿ. ಇವರು ತಮ್ಮ ಸಮುದಾಯವಾದ ಸೋಲಿಗರ ಸಮುದಾಯ ಆಚಾರವಿಚಾರಗಳನ್ನು ಇಂದಿಗೂ ಮುನ್ನಡೆಸಿಕೊಂಡು ಬರುತ್ತಿದ್ದಾರೆ. ಮದುವೆಗೆ ಮೊಲದಲೇ ಸೂಲಗಿತ್ತಿಯಾಗಿ ಇವರು ಕೆಲಸ ಮಾಡಲು ಆರಂಭಿಸಿದ್ದೇ ಇಲ್ಲಿನ ವಿಶೇಷ.

ತಮ್ಮ ತಾಯಿ ಕೂಡ ಸೂಲಗಿತ್ತಿ ಕೆಲಸ ಮಾಡುತ್ತಿದ್ದ ಕಾರಣ ಅವರ ಜೊತೆಗೆ ಹೋಗಿ ಸೂಲಿಗಿತ್ತಿ ಕೆಲಸದ ಅರಿವು ಪಡೆದರು. ಅವರ ಅಜ್ಜಿಯೂ ಹೆರಿಗೆ ಮಾಡಿಸುತ್ತಿದ್ದರಂತೆ. ಇದು ಆರಂಭದಲ್ಲಿ ಅವರಿಗೆ ಸಾಕಷ್ಟು ಭಯ ಆತಂಕ ಬೇಸರ ಮೂಡಿಸಿದರು ನಿಧಾನವಾಗಿ ಅದಕ್ಕೆ ಹೊಂದಿಕೊಂಡರು. ಹೆರಿಗೆ ಬೇನೆಯನ್ನು ಕಂಡು ಸಾಕಪ್ಪ ಸಾಕು ಈ ಬೇನೆ ಎಂದು ಭಾವಿಸಿದ್ದವರು.

ನಂತರ ಇದನ್ನೇ ಮುಂದುವರೆಸಿದ ಮಾದಮ್ಮನವರು ಇಂದು ಸಾವಿರಾರು ಮಹಿಳೆಯರಿಗೆ ಸೂಲಗಿತ್ತಿ ಸೇವೆ ಮಾಡಿದ್ದಾರೆ. ಸಾವಿರಾರು ಕಳ್ಳುಬಳ್ಳಿಗಳನ್ನು ಕತ್ತರಿಸಿದ್ದಾರೆ. ಇದು ಯಾವುದೇ ನಿರ್ದಿಷ್ಟ ಲಾಭವಿಲ್ಲದೆ ಮಾಡಿದ ಜನಸಮುದಾಯದ ಸೇವೆ. ಇಂತಹ ನಿಸ್ವಾರ್ಥ ಸೇವಕಿಯಾದ ಶ್ರೀ ಜಡೆಮಾದಮ್ಮನವರಿಗೆ ಈ ಬಾರಿಯ ಅಕಾಡೆಮಿಯ ವಾರ್ಷಿಕ ಪ್ರಶಸ್ತಿ ನೀಡಿ ಗೌರವಿಸಲು ಹರ್ಷವೆನ್ನಿಸುತ್ತದೆ.

ಶ್ರೀಮತಿ ಶಾರದಮ್ಮ
(ಚಿಕಮಗಳೂರು ಜಿಲ್ಲೆ)
ಸೋಬಾನೆ ಪದ

ಶ್ರೀಮತಿ ಶಾರದಮ್ಮ ಜನಪದ ಕಲಾವಿದೆಯಾಗಿ ಹೆಸರು ಮಾಡಿದ್ದಾರೆ. ಇವರು ಚಿಕಮಗಳೂರು ಜಿಲ್ಲೆ ಕಡೂರು ತಾಲೂಕು ಚೌಳಹಿರಿಯೂರಿನವರು. ಜುಲೈ 6, 1937ರಂದು ಜನಿಸಿದ ಇವರು ಈಗ 78 ವಸಂತಗಳನ್ನು ಪೂರ್ಣಗೊಳಿಸಿದ್ದಾರೆ. ಮೂಲತಃ ತರೀಕೆರೆ ತಾಲೂಕಿನ ಸೊಲ್ಲಾಪುರದವರಾದ ಇವರು ಬಾಲ್ಯದಲ್ಲಿ ಹಾಡುವುದನ್ನು ಕಲಿತರು. ಮನೆ ಮತ್ತು ಬೇಸಾಯದ ಕೆಲಸಗಳನ್ನು ಮಾಡುತ್ತಲೇ ಸುಮಾರು 60 ವರುಶಗಳಿಂದ ಜನಪದ ಕಲಾಕ್ಷೇತ್ರದಲ್ಲಿ ದುಡಿಯುತ್ತ ಬಂದಿದ್ದಾರೆ. ಇವರ ಸೋದರಿ ಶಿವಮ್ಮ ಕೂಡ ಹಾಡುಗಾರ್ತಿಯೇ.

ಇವರಿಬ್ಬರೂ ಕೂಡಿ ಹಾಡುತ್ತ ಅನೇಕ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಅಲ್ಲದೆ ಶ್ರೀ ಭೋಗ ನಂಜುಡೇಶ್ವರಸ್ವಾಮಿ ಭಜನಾ ಮಂಡಳಿಯ ಸದಸ್ಯರಾಗಿ ಕೀರ್ತನೆಗಳನ್ನು ಹಾಡುತ್ತಲೂ ಬರುತ್ತಿದ್ದಾರೆ. ಬಾಲ್ಯದಿಂದಲೂ ತಮ್ಮ ಸುತ್ತಮುತ್ತಲ ಪರಿಸರದಿಂದ ಕಿವಿಗೆ ಬೀಳುತ್ತಿದ್ದ ಹಾಡುಗಳನ್ನು ಕೇಳಿ ಸೋಬಾನೆ ಪದಗಳು, ಜನಪದ ಗೀತೆಗಳು, ಭಜನೆ ಹಾಡುಗಳು, ಬೀಸುವ ಕಲ್ಲಿನ ಪದಗಳು ಇತ್ಯಾದಿಗಳನ್ನು ಕಲಿತು ಹಾಡುತ್ತ ಬರುತ್ತಿದ್ದಾರೆ.

ವಿವಿಧ ಕಮ್ಮಟಗಳಲ್ಲಿ ಕಿರಿಯರಿಗೆ ಹಾಡುವುದನ್ನು ಕಲಿಸಿದ್ದಾರೆ. ಇದು ತಮ್ಮ ನಂತರದ ತಲೆಮಾರು ಜನಪದ ಸಂಗೀತದ ಬಂಡಿಯನ್ನು ಮುನ್ನಡೆಸುವ ಬಗೆಯೂ ಹೌದು. ತಮ್ಮ ಕಂಠದ ಸಿರಿಯನ್ನು ವಿಶಾಲ ಜನಸಮುದಾಯಕ್ಕೆ ತಲುಪಿಸುವ ಉದ್ದೇಶದಿಂದ 'ಜಾನಪದ ಸಂಭ್ರಮ' ಎಂಬ ಧ್ವನಿಸುರುಳಿಯನ್ನು ಬಿಡುಗಡೆ ಮಾಡಿದ್ದಾರೆ. ಇದು ಹೆಚ್ಚು ಪ್ರಸಿದ್ಧಿಯನ್ನು ಪಡೆದಿದೆ.

ಇವರ ಸಂಗೀತ ಸಾಧನೆಯನ್ನು ಗುರುತಿಸಿ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ, ಕನ್ನಡ ಸಿರಿ ಪ್ರಶಸ್ತಿ, ಜಾನಪದ ಸೇವಾ ಪ್ರಶಸ್ತಿಗಳು ದೊರೆತಿದೆ. ಇನ್ನೂ ಹಲವು ಸಂಘಸಂಸ್ಥೆಗಳಿಂದ ಗೌರವ ಪುರಸ್ಕಾರಗಳು ದೊರೆತಿವೆ. ಈಗ ಇಂತಹ ಜನಪದ ಪ್ರತಿಭೆಗೆ ಪ್ರಸಕ್ತ ಸಾಲಿನ ಅಕಾಡೆಮಿಯ ವಾರ್ಷಿಕ ಪ್ರಶಸ್ತಿ ನೀಡಿ ಪುರಸ್ಕರಿಸಲು ಉತ್ಸಾಹ ಮೂಡುತ್ತದೆ.

ಶ್ರೀ ಕುಟ್ಟಿ ಪಂಬದ
(ದಕ್ಷಿಣ ಕನ್ನಡ ಜಿಲ್ಲೆ)
ಭೂತ ಕಟ್ಟುವ ಕಲೆ

ತುಳುನಾಡಿನ ಭೂತಾರಾಧನೆಯ ಪ್ರಪಂಚ ಒಂದು ವಿಸ್ಮಯ ಲೋಕ. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಮಾತ್ರವಲ್ಲ ನೆರೆಯ ಕೇರಳದವರೆಗೂ ಹಬ್ಬಿರುವ ಈ ಭೂತಾರಾಧನೆ ಈ ಪ್ರದೇಶದ ಜನರ ಬದುಕಿನ ಅವಿಭಾಜ್ಯ ಅಂಗ. ಭಕ್ತಿ, ಜಾನಪದ, ಇತಿಹಾಸ, ತುಳುಭಾಷೆಯ ಪ್ರೌಢಿಮೆ, ಪ್ರಸಾಧನ ಕಲೆ ನೃತ್ಯದ ಸೊಬಗು, ಎಲ್ಲವನ್ನು ಒಳಗೊಂಡ ಭೂತಾರಾಧನೆ ಜಾನಪದ ವಿದ್ವಾಂಸರ ಪಾಲಿಗೆ ಅರಿವಿನ ಕಣಜ.

ಕರಾವಳಿಯ ಈ ಶ್ರೀಮಂತ ಜಾನಪದ ಕಲೆಯನ್ನು ಜೀವಂತವಾಗಿಟ್ಟದ್ದು ಭೂತಗಳನ್ನು ನಂಬಿಕೊಂಡು ಬಂದ ಜನರಾದರೂ ಅದಕ್ಕಿಂತಲೂ ಹೆಚ್ಚು ಇದರ ಉಳಿವಿಗಾಗಿ ಶ್ರಮಿಸುತ್ತಿರುವ ಭೂತಕೋಲದ ಕಲಾವಿದರು. ಬೌದ್ಧಿಕ ಪ್ರೌಢಿಮೆ ಮತ್ತು ದೈಹಿಕ ಶಕ್ತಿ ಎರಡನ್ನು ಬೇಡುವ ಈ ಕಲೆಗೆ ಜೀವ ತೇದ ಸಾವಿರಾರು ಕಲಾವಿದರಿದ್ದಾರೆ. ಇವರಿಂದಾಗಿಯೇ ಈ ಕಲೆ ನಮ್ಮ ನಾಡಿನಲ್ಲಿ ಇಂದಿಗೂ ಜೀವಂತವಾಗಿ ಉಳಿದುಕೊಂಡು ಬಂದಿದೆ.

ಕಳೆದ 45 ವರುಶಗಳಿಂದ ಭೂತದ ಪಾತ್ರಧಾರಿಯಾಗಿ ಕಲಾಸೇವೆ ಮಾಡುತ್ತ ಬಂದ ಕುಡ್ಡು ಪಂಬದರು ಸದ್ಯ ದೈಹಿಕವಾಗಿ ದಣಿದು ತೀವ್ರ ಬೆನ್ನುನೋವಿನಿಂದ ಬಳಲುತ್ತ ವಿಶ್ರಾಂತ ಜೀವನ ನಡೆಸುತ್ತಿದ್ದಾರೆ. ಕರಾವಳಿಯಲ್ಲಿ ಭೂತಕೋಲಗಳು ನಡೆಯುವುದೇ ಡಿಸೆಂಬರ್‌ನಿಂದ ಮೇವರೆಗಿನ ಆರು ತಿಂಗಳ ಅವಧಿಯಲ್ಲಿ. ಕುಡ್ಡು ಪಂಬದರು ಪ್ರತಿ ವರುಶ ಸರಾಸರಿ 50ರಿಂದ 55 ಕೋಲಗಳಲ್ಲಿ ಭೂತಗಳ ನರ್ತಕರಾಗಿ ಕೆಲಸ ಮಾಡಿದ್ದಾರೆ. ಇಂತಹ ನಿಷ್ಟಾವಂತ ಕಲಾವಿದರಿಗೆ ಈ ಬಾರಿಯ ಅಕಾಡೆಮಿಯ ವಾರ್ಷಿಕ ಪ್ರಶಸ್ತಿ ನೀಡಿ ಗೌರವಿಸಲು ಹರ್ಷವೆನ್ನಿಸುತ್ತದೆ.

ಶ್ರೀ ಆರ್.ಎಸ್ ತಮ್ಮಯ್ಯ
(ಹಾಸನ ಜಿಲ್ಲೆ)
ಲಾವಣಿ ಗಾಯಕರು

ಸಾಮಾನ್ಯವಾಗಿ ನಮ್ಮ ರಾಜ್ಯದ ಉತ್ತರ ಭಾಗದಲ್ಲಿ ಲಾವಣಿ ಗಾಯನ ಕಲೆಯು ವ್ಯಾಪಕವಾಗಿ ಕಂಡುಬರುತ್ತದೆ. ಇದರಲ್ಲಿ ಗಂಡಸರು ಮತ್ತು ಹೆಂಗಸರು ಇಬ್ಬರು ಹಾಡುತ್ತಾರೆಯಾದರೂ ಪ್ರತ್ಯೇಕವಾಗಿ ಹಾಡುವುದು ಹೆಚ್ಚಿದೆ. ದಪ್ಪು ಮತ್ತು ತಾಳಗಳನ್ನು ಹಿಡಿದು ನಿಂತರೆ ಜನರಲ್ಲಿ ಮೈನವಿರೇಳುವಂತೆ ಹಾಡುತ್ತಾರೆ. ಇದು ದಕ್ಷಿಣ ಕರ್ನಾಟಕದಲ್ಲಿಯೂ ಕೆಲವೆಡೆ ಕೆಲವು ಗಾಯಕರು ಹಾಡುತ್ತಾರೆ. ಅಂತಹ ಕೆವು ಗಾಯಕರಲ್ಲಿ ಶ್ರೀ ಆರ್. ಎಸ್. ತಮ್ಮಯ್ಯನವರು(70) ಒಬ್ಬರು.

ಇವರು ಹಾಸನ ಜಿಲ್ಲೆ ಅಸರೀಕೆರೆ ತಾಲ್ಲೂಕು ಕಣಕಟ್ಟೆ ಹೋಬಳಿಯ ರಾಂಪುರ ಗ್ರಾಮದವರು. ಇವರು ಪ್ರಸಿದ್ದ ಜನಪದ ಕಲಾವಿದರು. ಕಳೆದ ನಲವತ್ತು ವರುಶಗಳಿಂದ ಜನಪದ ಕಲೆಗಳ ಏಳಿಗೆಗೆ ಕೆಲಸ ಮಾಡುತ್ತ ಬಂದವರು. ಲಾವಣಿ, ಗೀಗೀ ಪದ, ಭಜನೆ ಮುಂತಾದವುಗಳನ್ನು ಹಾಡುತ್ತ ಹಾಡಿಕೆಯಲ್ಲಿ ಹೆಸರಾದವರು. ರಾಜ್ಯಮಟ್ಟದ ಮತ್ತು ತಾಲೂಕು ಮಟ್ಟದ ಅನೇಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟಿದ್ದಾರೆ. ಜನಪದ ಕಲಾವಿದರಿಗೆ ದೊರೆಯುವ ಮಾಶಾಸನವನ್ನು ಪಡೆಯುತ್ತಿದ್ದಾರೆ.

ಇಂತಹ ಕಲಾವಿದರಿಗೆ ಈ ಬಾರಿಯ ಅಕಾಡೆಮಿಯ ವಾರ್ಶಿಕ ಪ್ರಶಸ್ತಿ ನೀಡಲು ಖುಷಿಯೆನ್ನಿಸುತ್ತದೆ.

ಶ್ರೀ ರಾಜು ಮೇದ
(ಕೊಡಗು ಜಿಲ್ಲೆ)
ಪರೆಕೊಟ್ಟವಾದ್ಯ

ಮೇದರ ರಾಜು (64) ಕೊಡಗು ಜಿಲ್ಲೆಯ ವಿರಾಜಪೇಟೆ ತಾಲೂಕು ತೋರ ಗ್ರಾಮದ ಮೇದರ ಜನಾಂಗದ ನಿವಾಸಿ. ತಮ್ಮ 9ನೆಯ ವಯಸ್ಸಿನಿಂದಲೇ ತಂದೆ ಜೊತೆ ಚರ್ಮವಾದ್ಯವಾದ "ಪರೆ'ಯನ್ನು ಬಾರಿಸುತ್ತ ಬೆಳೆದವರು. ಆ ಪ್ರದೇಶದಲ್ಲಿ ಪರೆ ಬಾರಿಸಿಕೊಂಡು ತಾಲಿಪಾಟ್ ಹಾಡುತ್ತ ದೊಡ್ಡ ಹೆಸರು ಮಾಡಿದವರು. ಇವರ ತಂದೆ ಎಂ.ಕೆ. ಸುಬ್ಬಯ್ಯ ಮತ್ತು ತಾಯಿ ಸೀತಮ್ಮ. ಯಾವುದೇ ಧಾರ್ಮಿಕ ಆಚರಣೆ, ಸಾವು ತಿಥಿ, ಮಂಗಳ ಕಾರ್ಯಗಳಿರಲಿ ಎಂ. ಎಸ್. ರಾಜು ಅವರು ಪರೆ–ಕೊಟ್ಟು ಪಾಟ್ ವಾದ್ಯ ವಿಲ್ಲದೆ ಅವು ನಡೆಯುವುದಿಲ್ಲ. ಇದನ್ನು ಕಳೆದ 50 ವರುಶಗಳಿಂದಲೂ ನಡೆಸಿಕೊಂಡು ಬರುತ್ತಿದ್ದಾರೆ. ಮೇದ ಜನಾಂಗದ ದೊಡ್ಡ ಕಲಾವಿದರು. ಆ ಸಮುದಾಯದ ಕಲೆಯನ್ನು ಮುಂದುವರೆಸಿಕೊಂಡು ಬರುತ್ತಿರುವ ಮುಖ್ಯ ಕಲಾವಿದರು. ಅಳಿವಿನಂಚಿನಲ್ಲಿರುವ ಪರೆಕೊಟ್ ವಾದ್ಯವನ್ನು ಮುಂದುವರೆಸಿಕೊಂಡು ಹೋಗುತ್ತಿರುವ ಇಂತಹ ಹಿರಿಯ ಕಲಾವಿದರಿಗೆ ಈ ಬಾರಿಯ ಅಕಾಡೆಮಿಯ ವಾರ್ಶಿಕ ಪ್ರಶಸ್ತಿ ನೀಡಿ ಗೌರವಿಸಲು ಸಂತಸವೆನಿಸುತ್ತದೆ.

ಶ್ರೀಬುಜಂಗ ಕೊರಗ

(ಉಡುಪಿ ಜಿಲ್ಲೆ)

ಕೊರಗರ ಕೊಳಲು ಕಲಾವಿದ

ಶ್ರೀ ಭುಜಂಗ ಕೊರಗ (72) ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನ ಮರವಂತೆ ಗ್ರಾಮದ ನಿರೋಣಿ ಕೊರಗ ಕಾಲೋನಿಯ ನಿವಾಸಿ. ಇವರು ಶ್ರೀಮತಿ ಮಂಗಳಿ ಮತ್ತು ಕುಪ್ಪ ಕೊರಗ ದಂಪತಿಗಳ ಮಗ. ಈ ದಂಪತಿಗಳ 8 ಮಕ್ಕಳಲ್ಲಿ ಇವರು ಮೊದಲನೆಯವರು. ಎಂದಿನಂತೆ ಬಡತನ ಮತ್ತು ಅನಕ್ಷರತೆಯಿಂದ ಇಡೀ ಸಮುದಾಯ ಬಳಲಿದಂತೆ ಭುಜಂಗ ಕೊರಗರು ಇದರಿಂದ ಬಳಲಿದವರೆ. ಅಂದರೆ ನಮ್ಮ ಸಮಾಜದಲ್ಲಿ ಹುಟ್ಟು ಅವರ ಸಾಮಾಜಿಕ ಆರ್ಥಿಕ ಸ್ಥಾನಮಾನವನ್ನು ನಿರ್ಧರಿಸುವುದರಲ್ಲಿ ಇಂದಿಗೂ ಒಂದು ಪ್ರಧಾನ ಗುರುತಾಗಿರುವುದು ಇದರಿಂದ ತಿಳಿದು ಬರುತ್ತದೆ.

ತಮ್ಮ ಬಾಲ್ಯದಿಂದಲೇ ತಮ್ಮ ಕೊರಗ ಸಮುದಾಯದ ಕುಲಕಸುಬುಗಳಾದ ಬುಟ್ಟಿ ಮತ್ತು ಗೆರ್ಸಿ ಹೆಣೆಯುವುದನ್ನು ಕಲಿತುಕೊಂಡರು. ಅದನ್ನು ಇಂದಿಗೂ ಮಾಡುತ್ತ ಬರುತ್ತಿದ್ದಾರೆ. ಹೀಗೆ ಕುಲವೃತ್ತಿಯನ್ನು ಕಲಿಯುವುದರ ಜೊತೆಗೆ ಕೊಳಲು ಡೋಲು ಮತ್ತು ಚಂಡೆ ನುಡಿಸುವುದನ್ನು ಕಲಿತುಕೊಂಡರು. ಬರೀ ನುಡಿಸುವುದು ಮಾತ್ರ ಆ ವಾದ್ಯ ಪರಿಕರಗಳನ್ನು ತಯಾರಿಸುವುದನ್ನು ಕಲಿತುಕೊಂಡರು. ತಮ್ಮ ಹಿರೀಕರ ಜೊತೆಗೆ ಈ ಕಲೆಯನ್ನು ರೂಢಿಸಿಕೊಂಡ ಭುಜಂಗರು ಇಂದು ಮಹತ್ವ ಕಲಾವಿದರಾಗಿ ಬೆಳೆದು ನಿಂತಿದ್ದಾರೆ.

ಶ್ರೀ ಕೊರಗ ತನಿಯ ಕಲಾವೇದಿಕೆ ಗೌರವ ಅಧ್ಯಕ್ಷರಾಗಿದ್ದಾರೆ. ಹೀಗೆ ಅನೇಕ ವೇದಿಕೆಗಳಲ್ಲಿ ತಮ್ಮ ಕಲೆಯನ್ನು ಪ್ರದರ್ಶಿಸಿದ್ದಾರೆ. ಮತ್ತು ಅನೇಕ ತರುಣರಿಗೆ ತಾವು ಕಲಿತ ಕಲೆಯನ್ನು ಕಲಿಸಿ ತಮ್ಮ ಪರಂಪರೆ ಮುಂದುವರೆಯುವಂತೆ ನೋಡಿಕೊಂಡಿದ್ದಾರೆ. ಸಮುದಾಯದ ಜೊತೆಗೆ ಕೂಡಿ ಜೀವಿಸುವ ನೈಜಜೀವಿಗಳಿಗೆ ಈ ಬಾರಿಯ ಅಕಾಡೆಮಿಯ ವಾರ್ಷಿಕ ಪ್ರಶಸ್ತಿಯನ್ನು ಕೊಟ್ಟು ಗೌರವಿಸಲು ಹೆಮ್ಮೆಯೆನಿಸುತ್ತದೆ.



ಶ್ರೀಮತಿ ಎಂ.ಸಿ. ರೇವಮ್ಮ

(ಮಂಡ್ಯ ಜಿಲ್ಲೆ)

ತತ್ವಪದ

ಮಂಡ್ಯ ಜಿಲ್ಲೆಯ ಮಂಡ್ಯ ತಾಲ್ಲೂಕಿನ ಮಲ್ಲಿಗೆರೆ ಗ್ರಾಮದ ಚಿಕ್ಕೀರಯ್ಯ ಮತ್ತು ಕೆಂಪೀರಮ್ಮ ದಂಪತಿಗಳ ಮಗಳಾಗಿ ಎಂ. ಸಿ. ರೇವಮ್ಮ 1952ರಲ್ಲಿ ಜನಿಸಿದವರು. ಸದ್ಯ 65ವರುಶಗಳನ್ನು ಪೂರೈಸಿದ್ದಾರೆ. ಬಾಲ್ಯದಿಂದಲೇ ತತ್ವಪದ ಗಾಯನ ಸೋಬಾನೆ ಪದಗಳ ಹಾಡುಗಾರಿಕೆ ಅಭ್ಯಾಸ. ತಂದೆ ಶನಿದೇವರ ಕಥೆಗಾರರು. ಮತ್ತು ರಂಗಭೂಮಿ ಕಲಾವಿದರು. ಇವರ ಅತ್ತೆ ಸೋಬಾನೆ ಪದಗಳ ಹಾಡುಗಾರ್ತಿ. ಮಾವ ತತ್ವಪದ ಗಾಯಕರು. ತವರು ಮತ್ತು ಗಂಡನ ಮನೆಗಳೆರಡರಲ್ಲಿಯೂ ಜನಪದ ಹಾಡಿಕೆಯ ಪರಿಸರ ಇದ್ದುದರಿಂದ ಅದರ ಪ್ರೇರಣೆ ಪಡೆದು ರೇವಮ್ಮನವರು ಒಳ್ಳೆಯ ಗಾಯಕಿಯಾಗಿ ಬೆಳೆದಿದ್ದಾರೆ. ಇವರ ಗಂಡ ಕೂಡ ತತ್ವಪದ, ಜನಪದ ಹಾಡುಗಳು ಮತ್ತು ವಚನಗಳ ಗಾಯಕರು. ಅವರ ಜೊತೆಗೂಡಿ ರೇವಮ್ಮನವರು ಅನೇಕ ಕಾರ್ಯಕ್ರಮಗಳನ್ನು ನಾಡಿನೆಲ್ಲೆಡೆ ನೀಡಿದ್ದಾರೆ. ಅಜ್ಜಿಯ ಪ್ರೇರಣೆಯಿಂದ ಪ್ರಸೂತಿ ಮಾಡಿಸುವ ಅಭ್ಯಾಸವಿದೆ. ಆಕಾಶವಾಣಿ ದೂರ ದರ್ಶನಗಳಲ್ಲಿ ಕಾರ್ಯಕ್ರಮ ನೀಡಿದ್ದಾರೆ. ಇಂತಹವರಿಗೆ ಈ ಬಾರಿಯ ಅಕಾಡೆಮಿಯ ವಾರ್ಷಿಕ ಪ್ರಶಸ್ತಿ ನೀಡಿ ಗೌರವಿಸಲು ಸಂತೋಷವೆನ್ನಿಸುತ್ತದೆ.

ಶ್ರೀಮತಿ ಸಿದ್ದಮ್ಮ
(ಮೈಸೂರು ಜಿಲ್ಲೆ)
ಸೋಬಾನೆ ಪದ

ಶ್ರೀಮತಿ ಸಿದ್ದಮ್ಮ ಮೈಸೂರು ಜಿಲ್ಲೆಯ ಟಿ. ನರಸೀಪುರ ತಾಲೂಕಿನ ಬೀಡನಹಳ್ಳಿ ಗ್ರಾಮದವರು. ಇವರ ಗಂಡ ಶ್ರೀ ಸಣ್ಣಯ್ಯ. 70 ವರುಶವಾಗಿದೆ. 1941ರಲ್ಲಿ ಜನಿಸಿದವರು. ಆದಿ ಕರ್ನಾಟಕ ಜಾತಿಗೆ ಸೇರಿದವರು. ಸೋಬಾನೆ ಪದಗಳ ಹಾಡುಗಾರ್ತಿ. ಹಲವು ಸಂಘ ಸಂಸ್ಥೆಗಳು ಏರ್ಪಡಿಸಿದ ಸಮಾರಂಭಗಳಲ್ಲಿ, ಮೈಸೂರು ಆಕಾಶವಾಣಿಯಲ್ಲಿ ಕಾರ್ಯಕ್ರಮ ನೀಡಿದ್ದಾರೆ. ಮಹದೇಶ್ವರ ಬೆಟ್ಟದಲ್ಲಿ ದೀಪಾವಳಿಯಲ್ಲಿ ನಡೆವ ಜಾತ್ರೆಯಲ್ಲಿ ಕಾರ್ಯಕ್ರಮ ನೀಡಿದ್ದಾರೆ.

ಹೀಗೆ ಮೈಸೂರು ಚಾಮರಾಜನಗರ ರಾಮನಗರ ಜಿಲ್ಲೆಗಳಾದ್ಯಂತ ನಡೆಸಿದ ಕಾರ್ಯಕ್ರಮಗಳಲ್ಲಿ ಸೋಬಾನೆ ಪದಗಳನ್ನು ಹಾಡಿ ತಮ್ಮ ಕಲೆಯನ್ನು ಪ್ರದರ್ಶಿಸಿದ್ದಾರೆ. ಆ ಮೂಲಕ ಸೋಬಾನೆ ಹಾಡಿನ ಜನಪದ ಕಲಾಪ್ರಕಾರವನ್ನು ಇಂದಿಗೂ ಜೀವಂತವಾಗಿಟ್ಟಿರುವ ಕಲಾವಿದರಲ್ಲಿ ಸಿದ್ದಮ್ಮನವರು ಒಬ್ಬರಾಗಿದ್ದಾರೆ. ಇಂತಹವರಿಗೆ ಈ ಬಾರಿಯ ಅಕಾಡೆಮಿಯ ವಾರ್ಷಿಕ ಪ್ರಶಸ್ತಿ ನೀಡಿ ಗೌರವಿಸಲು ಸಂತೋಷವೆನ್ನಿಸುತ್ತದೆ.

ಜಾನಪದ ತಜ್ಞ
ಪ್ರಶಸ್ತಿ ಪಡೆದವರು

ಡಾ. ಇಂದಿರಾ ಹೆಗ್ಗಡೆ

(ಬಿಎಸ್ ಗದಗಿಮಠ ಪ್ರಶಸ್ತಿ ಪುರಸ್ಕೃತರು)

ಶ್ರೀಮತಿ ಡಾ. ಇಂದಿರಾ ಹೆಗ್ಗಡೆ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲೂಕಿನ ಎಳತ್ತೂರು ಗುತ್ತು ಗ್ರಾಮದವರು. ಇವರು ಮಂಗಳೂರಿನ ಕಿನ್ನಿಗೋಳಿಯಲ್ಲಿ ಮಾರ್ಚ್ 3, 1949ರಲ್ಲಿ ಜನಿಸಿದ ಇವರು ಸಾಹಿತ್ಯದ ಪರಿಸರವಿದ್ದ ಮನೆಯಲ್ಲಿ ಬೆಳೆದವರು. ಇದುವರೆಗೆ 3 (ಮೋಹಿನಿಯ ಸೇಡು, ಪುರುಷರೇ ನಿಮಗೆ ನೂರು ನಮನಗಳು, ಬದಿ) ಕಥಾ ಸಂಕಲನ, 4 (ಅಮಾಯಕಿ, ಒಡಲುರಿ, ಮಂಥನ, ಬದಿ) ಕಾದಂಬರಿಗಳು ಮತ್ತು 'ಕಾವ್ಯಗಳ ಪುಟದಿಂದ ನೀನೆದ್ದು ನಿಲ್ಲು' ಎಂಬ ಒಂದು ಕವನ ಸಂಕಲನ ಪ್ರಕಟಿಸಿದ್ದಾರೆ. 'ಗುತ್ತಿನಿನಿಂದ ಸೈನಿಕ ಜಗತ್ತಿಗೆ' ಎಂಬ ಇವರ ಅನುಭವ ಕಥನ ಬಹಳ ಪ್ರಸಿದ್ದವಾದುದು.

ಇದರ ನಂತರ ಸಂಶೋಧನೆಯ ಕ್ಷೇತ್ರದಲ್ಲಿ ಗಂಭೀರವಾಗಿ ತೊಡಗಿಕೊಂಡು ಕಾರ್ಯನಿರ್ವಹಿಸಿದ್ದಾರೆ. "ಬಂಟರು–ಒಂದು ಸಮಾಜೋ ಸಾಂಸ್ಕೃತಿಕ ಅಧ್ಯಯನ" ಪ್ರಮುಖವಾದುದು. ಇದು ಇವರನ್ನು ಕನ್ನಡ ಸಂಶೋಧನೆಯ ಕ್ಷೇತ್ರದಲ್ಲಿ ಗಟ್ಟಿಯಾಗಿ ನೆಲೆಯೂರುವಂತೆ ಮಾಡಿದೆ. "ತುಳುವರ ಮೂಲತಾನ ಆದಿ ಆಲಡೆ ಪರಂಪರೆ ಮತ್ತು ಪರಿವರ್ತನೆ" ಇವರ ಡಿ.ಲಿಟ್ ಪ್ರಬಂಧ. "ಮೂಲತಾನದ ನಾಗಬ್ರಹ್ಮ ಮತ್ತು ಪರಿವಾರ ದೈವಗಳ ಪಾಡ್ದನ" ಇವರ ಮತ್ತೊಂದು ಮುಖ್ಯ ಸಂಶೋಧನೆಯ ಗ್ರಂಥ. 'ತುಳುನಾಡಿನ ಗ್ರಾಮಾಡಳಿತ ಮತ್ತು ಅಜಲು', 'ಚೇಳಾರು ಗುತ್ತು ಅಗೊಳಿ ಮಂಜಣ್ಣಾಯ್ಗೆರ್– ಸಾಂಸ್ಕೃತಿಕ ಐತಿಹಾಸಿಕ ಶೋಧ',. 'ತುಳುವೆರೆ ಅಟಿಲ ಅರಗಣೆ', ಇವರ ಪ್ರಸಿದ್ದ ಕೃತಿಗಳು.

ಪ್ರಶಸ್ತಿಗಳು: ಶ್ರೀಮತಿ ಡಾ. ಇಂದಿರಾ ಹೆಗ್ಗಡೆಯವರಿಗೆ ಯಶಸ್ವಿ ಮಹಿಳಾ ಉದ್ಯಮಿ ಪ್ರಶಸ್ತಿ, ವಸುದೇವ ಭೂಪಾಲಂ ಪ್ರಶಸ್ತಿ, ಅಂಬರೀಶ ಪ್ರಶಸ್ತಿ, ಅತ್ತಿಮಬ್ಬೆ ಪ್ರಶಸ್ತಿ, ಬೇಕಲ್ ಶಾಂತಾ ನಾಯಕ್ ಪ್ರಶಸ್ತಿ, ತುಳುನಾಡ ಸಿರಿ ಪ್ರಶಸ್ತಿ. ಹೀಗೆ ಅನೇಕ ಪ್ರಶಸ್ತಿಗಳು ಸಂದಿವೆ. ಇಂತಹ ಬಹುಮುಖಿ ಪ್ರತಿಭೆಗೆ ಈ ಬಾರಿಯ ಬಿ.ಎಸ್. ಗದಗಿಮಠ ಪ್ರಶಸ್ತಿ ನೀಡಲು ಸಂತೋಷವೆನ್ನಿಸುತ್ತದೆ.

ಶ್ರೀ ಕೋಟಗಾನಹಳ್ಳಿ ರಾಮಯ್ಯ

(ಡಾ. ಜೀ.ಶಂ.ಪ ಪ್ರಶಸ್ತಿ ಪುರಸ್ಕೃತರು)

ಹಾಕಬ್ಯಾಡ ಹಾಕಬ್ಯಾಡಣ್ಣಾ.....ಎಲೆ ಬೇಟೆಗಾರಣ್ಣಾ.....ಹೊಟ್ಟೆಯೊಳಗೆ ಕಂದನಿರುವಾನೋ.....

.....ಕೋಲಾರ ನೆಲದ ಈ ಅಚ್ಚಗನ್ನಡ ಜನಪದ ಗೀತೆ.....ಯನ್ನು ಆ ಹೊಟ್ಟೆಯೊಳಗಿರುವ ಕಂದನು..... ಜೀತಗಾರನಾಗಿ..... ಇದೇ ಮಟ್ಟು, ಪಡಿ– ಪದಾರ್ಥಗಳಿಂದಲೇ.....

ಹಚ್ಚಬ್ಯಾಡ ಹಚ್ಚಬ್ಯಾಡವ್ವ..... ಜೀತಕ್ಕ ನನ್ನನ್ನು..... ಎಳೆ ಬಾಳೆ ಸುಳಿ ನಾನವ್ವಾ.....

ಎನ್ನುವ ಆಧುನಿಕ ಜನಪದ ಗೀತೆಯಾಗಿಸುವುದರಿಂದ ತಮ್ಮ ಜನಪದದೊಂದಿಗಿನ ಅನುಸಂಧಾನ ಆರಂಭಿಸಿದ ಕೋಟಿಗಾನಹಳ್ಳಿ ರಾಮಯ್ಯ. ಜನಪದಕ್ಕೆ ಇದ್ದ 'ಮ್ಯೂಸೀಮೀಕರಣಮಿತಿ ಉಲ್ಲಂಘಿಸಿ ಆಧುನಿಕ ಬದುಕಿನ ಭಾಗವಾಗುವಂತೆ ಅದರಲ್ಲೂ ವಿಶೇಷವಾಗಿ ಮಕ್ಕಳಿಗೆ ಅನುಭವ ಜನ್ಯ ಕಲಿಕೆಯಾಗುವಂತಹ ಪರಿಕರಗಳ ನಿರಂತರ ನಿರ್ಮಾಣದಲ್ಲಿರುವವರು. ಅದಕ್ಕಾಗಿ ಅವರು ಆಯ್ಕೆ ಮಾಡಿಕೊಂಡಿರುವ ಮಾಧ್ಯಮ ಮಕ್ಕಳ ರಂಗ ಭೂಮಿ.

ವಿಶ್ವಬ್ಯಾಂಕ್‌ನ ಜಿಲ್ಲಾ ಪ್ರಾಥಮಿಕ ಯೋಜನೆಗಾಗಿ ಸಂಪಾದಿಸಿಕೊಟ್ಟಿರುವ 'ರತ್ನಪಕ್ಷಿ' (ಜನಪದ ಕತೆಗಳು), ಬಾರೋ ಗೀಜಗ (ಶಿಶು ಪ್ರಾಸಗಳು), ಅಂತೆಯೇ ಕತೆ ಕತೆ ಕಾರುಂಡ (ಜನಪದ ಕತೆಗಳ ಧ್ವನಿ ಉರಳಿ), ಹುಯ್ಯೋ ಹುಯ್ಯೋ ಮಳೆರಾಯ (ಜನಪದ ಶಿಶು ಪ್ರಾಸಗಳ ಧ್ವನಿ ಸುರಳಿ), ಜನಪದವನ್ನು ಶೈಕ್ಷಣಿಕ ಪಠ್ಯವಾಗಿಸುವ ಬಹು ಮುಖ್ಯ ಪ್ರಯೋಗವಾಗಿದೆ.

'ಮೂಲ'ವನ್ನು ಆಧರಿಸಿ ಹೇಗೆ ಹಳಗನ್ನಡ ಕವಿಗಳು ಮಹಾಭಾರತ ಮತ್ತು ರಾಮಾಯಣಗಳನ್ನು ರೂಪಾಂತರಿಸಿ ನೆಲಕ್ಕಿಳಿಸಿದಂತೆಯೇ ರಾಮಯ್ಯನವರು ಕೂಡ 'ಜನಪದ' ವನ್ನು ಈ ಕಾಲದ ಒಡಲಿಗೆ ಮರುರೂಪಿಸಿ ಜನಪದವನ್ನೇ ಮಹಾಪುರಾಣದ ಆಖ್ಯಾಯಿಕೆಯಾಗಿ ಮಂಡಿಸಿರುವವರು.

ಜನಪದದ ಜೀವಂತಿಕೆಗೆ ಅದನ್ನು ಮರು ಹೇಳುವುದೇ ಮದ್ದೆಂದು ಭಾವಿಸಿರುವ ರಾಮಯ್ಯ ಜನಪದ ಕುರಿತಂತೆ ಬರೆಯುವುಕ್ಕಿಂತಲೂ 'ನಡೆ'ಸುವುದು ಇವರ ಗುರಿ. ಇಂತಹ ವ್ಯಕ್ತಿಗೆ ಈ ಬಾರಿಯ ಡಾ.ಜೀ.ಶಂ.ಪ ಪ್ರಶಸ್ತಿ ನೀಡಲು ಸಂತೋಷವೆನ್ನಿಸುತ್ತದೆ.